13

# ಚಿತ್ತಶುದ್ಧಿಯಿಂದ ಜೀವಿಸುವದು

# (6:1-18)

"ನಿಮ್ಮ ನೀತಿಯು ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿಗಿಂತಲೂ ಹೆಚ್ಚಿನದಾಗದಿದ್ದರೆ ನೀವು ಪರಲೋಕ ರಾಜ್ಯದಲ್ಲಿ ಸೇರಲಾರಿರಿ" ಎಂದು ಯೇಸು ತನ್ನ ಶಿಷ್ಯರಿಗೆ ಪ್ರಕಟಿಸಿದನು (5:20). ಆತನು ಹೇಳಿದ ವಾಕ್ಯಗಳು ಪರ್ವತ ಪ್ರಸಂಗದಲ್ಲಿನ ಎಲ್ಲಾ ಅಂಶಗಳ ಸಂಗ್ರಹವಾಗಿತ್ತು.

ಮತ್ತಾಯ 5:21-48ರ, ಆತನ ಪ್ರಸಂಗದ ಮೊದಲಿನ ಭಾಗದಲ್ಲಿ ಆತನು ಏನು ಹೇಳಿದನು ಮತ್ತು ಯೆಹೂದ್ಯರ ಸಂಪ್ರದಾಯವು ಏನು ಹೇಳುತ್ತದೆ ಎಂಬುದರ ಮಧ್ಯದಲ್ಲಿರುವ ಐದು ವ್ಯತ್ಯಾಸಗಳೊಂದಿಗೆ ತನ್ನ ಬೋಧನೆಗಳನ್ನು ರಚಿಸಿದನು. 6:1-18ರಲ್ಲಿ, ಪ್ರಸಂಗದ ಎರಡನೆಯ ಭಾಗದ ಸೂಚನೆಗಳಲ್ಲಿ, ಧಾರ್ಮಿಕ ಪದ್ಧತಿಗಳನ್ನು ಮತ್ತು ಹೃದಯಕ್ಕೆ ಸಂಬಂಧಿಸಿದವುಗಳ ಬಗ್ಗೆ ವ್ಯವಹರಿಸುತ್ತದೆ - ನಿಜವಾದ ಧರ್ಮ ಹೊರಗಿನ ಧಾರ್ಮಿಕ ಆಚರಣೆಗಳನ್ನು ವಿರೋಧಿಸಿರುವವರೊಂದಿಗೆ ವ್ಯವಹರಿಸುತ್ತದೆ.

ಒಂದು ಸಾಮಾನ್ಯ ಎಚ್ಚರಿಕೆಯ ತರುವಾಯ (6:1), ಯೇಸು ಮೂರು ಪ್ರಧಾನ ಉದಾಹರಣೆಗಳನ್ನು ಹೇಳಿದನು: ಕೊಡುವದು (6:2-4), ಪ್ರಾರ್ಥಿಸುವದು (6:5-15), ಮತ್ತು ಉಪವಾಸ (6:16-18). ಯೆಹೂದ್ಯ ಬೋಧಕರು ತಮ್ಮ ಸೂಚನೆಯಲ್ಲಿ ಈ ಮೂರು ಉದಾಹರಣೆಗಳನ್ನು ಉಪಯೋಗಿಸುವದು ಸಾಮಾನ್ಯವಾಗಿತ್ತು[1] ಎಂದು Craig S. Keener ಪ್ರಸ್ತಾಪಿಸಿದ್ದಾರೆ.

## ಸಾಮಾನ್ಯ ಎಚ್ಚರಿಕೆ (6:1)

**[1]ಜನರು ನೋಡಲಿ ಎಂದು ನಿಮ್ಮ ಧರ್ಮಕಾರ್ಯಗಳನ್ನು ಅವರ ಮುಂದೆ ಮಾಡಬಾರದು, ನೋಡಿರಿ; ಹಾಗೆ ಮಾಡಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯ ಹತ್ತಿರ ನಿಮಗೆ ಫಲದೊರೆಯದು.**

**ವಚನ 1.** ಕೊಡುವದು, ಪ್ರಾರ್ಥಿಸುವದು, ಮತ್ತು ಉಪವಾಸ ವಿಷಯಗಳ ಕುರಿತಾಗಿ ಆತನು ಹೇಳುವಾಗ ಪರಿಣಾಮಕಾರಿಯಾಗಿ ಅವುಗಳಿಗೆ, "ನಾನು ಹೇಳುವಂತದ್ದಕ್ಕೆ ಜಾಗೃತನಾಗಿ ಗಮನಕೊಡಿರಿ." **ಜಾಗೃತನಾಗಿರು** (*prosechō*) ಎಂಬ ಗ್ರೀಕ್ ಶಬ್ದವು "ಕೈವಶ ಮಾಡಿಕೋ," "ಗಮನಕೊಡು," ಮತ್ತು "ಎಚ್ಚರವಾಗಿರಿ" ಎಂಬುದನ್ನು ಸೂಚಿಸುತ್ತದೆ. **ಧರ್ಮಕಾರ್ಯಗಳ** ವಿಷಯದಲ್ಲಿ ಶಾಸ್ತ್ರಿಗಳು ಮತ್ತು ಫರಿಸಾಯರ ಮನೋಭಾವನೆಯನ್ನು ತನ್ನ ಶಿಷ್ಯರು ಬೆಳಸಿಕೊಳ್ಳುದಕ್ಕೆ ವಿರೋಧವಾಗಿ ಯೇಸು ಎಚ್ಚರಿಸಿದ್ದಾನೆ. "ಧರ್ಮಕಾರ್ಯಗಳು" (*dikaiosunē*) ಎಂಬ ಪದವು 5:20ರಿಂದ ಪುನರಾವರ್ತಿನೆಯಾಗಿದೆ. KJV, ಮೂಲಪಾಠದ ಕೋಶದ ಆಧಾರದ ಮೇಲೆ ವಚನ 1ರಲ್ಲಿ "ನೀತಿಯ" ಬದಲಾಗಿ "ದಾನ" ಎಂದು ಬರೆಯಲಾಗಿದೆ. ಹಾಗಿದ್ದರೂ, "ನೀತಿಯತೆ" ಎಂದು ಓದುವದು ಶ್ರೇಷ್ಟವಾಗಿದೆ, ಮತ್ತು 6:2-4ರಲ್ಲಿ ಚರ್ಚಿಸಿದ ಸಂಕ್ಷಿಪ್ತವಾದ ಪರಿಚಯವು ಕೊಡುವದಕ್ಕಿಂತಲೂ 6:2-18ಕ್ಕೆ 6:1 ಈ ವಚನವು ಸಾಮಾನ್ಯ ಪರಿಚಯವಾಗಿದೆ.

ನಿಜವಾದ ನೀತಿಯತೆಯು ಖಾಲಿತನವನ್ನು ತಪ್ಪಿಸುತ್ತದೆ, ಹೊರಗಡೆ ತೋರಿಸುವದು ಯಥಾರ್ಥವಾದ ಹೃದಯದಿಂದ ಅದು ಬಿಟ್ಟು ಹೋಗುವಂಥದ್ದಾಗಿದೆ. **ಅವರ** (ಮನುಷ್ಯರ) **ಮುಂದೆ** ಇಂಥಹ ಧಾರ್ಮಿಕ ಕಾರ್ಯಗಳನ್ನು ಮಾಡಬಾರದು ಅದರಿಂದ ಅವರು ಆ ಕಾರ್ಯಗಳಿಂದ **ಗುರುತಿಸಲ್ಪಡುತ್ತಾರೆ.** ಅದರ ಬದಲಾಗಿ, ಅವರು ಭಕ್ತಿಯ ಹೃದಯದಿಂದ ದೇವರಿಗೆ ಗೌರವಿಸಿ ಮತ್ತು ಮಹಿಮೆ ಪಡಿಸಬೇಕು. "ನೀತಿಯತೆ" ಕಾರ್ಯಗಳು ದೇವರಲ್ಲಿ ಮತ್ತು ಜೊತೆ ವ್ಯಕ್ತಿಯ ಕಡೆಗೆ ಇರುವ ಪ್ರೀತಿಯಿಂದ ಮಾಡದಿದ್ದರೆ ಅಂತಹಾ ಕಾರ್ಯಗಳು ವ್ಯರ್ಥ ಮತ್ತು ಶೂನ್ಯದ ಕಾರ್ಯಗಳಾಗುತ್ತದೆ (1 ಕೊರಿಂಥ 13:1-3). ಯಾರು ದುರುದ್ದೇಶದಿಂದ ಧಾರ್ಮಿಕ ಕಾರ್ಯಗಳನ್ನು ಮಾಡುವರೋ ಅವರಿಗೆ ತಂದೆಯಿಂದ **ಫಲದೊರೆಯದು.** "ಫಲ" (*misthos*) ಎಂಬ ಶಬ್ದ ಪ್ರತಿಯೊಂದು ಅಂಶದ ಪ್ರಾರಂಭದಲ್ಲಿ ಪುನರಾವರ್ತನೆಯಾಗಿದೆ, ಅದು ನಾವು ಕೊಡುವದು (6:2), ಪ್ರಾರ್ಥನೆ (6:5), ಮತ್ತು ಉಪವಾಸಗಳಿಗೆ (6:16) ದೇವರ ಪ್ರತಿಕ್ರಿಯೆಯ ಸಂಕೇತವಾಗಿ ಸೂಚಿಸುತ್ತದೆ.

## ಕೊಡುವದು (6:2-4)

**²ಆದದರಿಂದ ನೀನು ಧರ್ಮಕೊಡುವಾಗ ನಿನ್ನ ಮುಂದೆ ಕೊಂಬೂದಿಸಬೇಡ; ಜನರಿಂದ ಹೊಗಳಿಸಿಕೊಳ್ಳಬೇಕೆಂದು ಕಪಟಿಗಳು ಸಭಾಮಂದಿರಗಳಲ್ಲಿಯೂ ಬೀದಿಗಳಲ್ಲಿಯೂ ಹಾಗೆ ಮಾಡುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ³ನೀನಾದರೆ ಧರ್ಮಕೊಡುವಾಗ ನೀನು ಧರ್ಮಕೊಟ್ಟದ್ದು ಅಂತರಂಗವಾಗುವ ಹಾಗೆ ನಿನ್ನ ಬಲಗೈ ಮಾಡಿದ್ದು ಎಡಗೈಗೂ ತಿಳಿಯದಿರಲಿ. ⁴ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು.**

**ವಚನ 2.** *Hotan* ಎನ್ನುವ ಗ್ರೀಕ್ ಚಿಕ್ಕ ಪದವು ನೀತಿಯ ಕಾರ್ಯದೊಂದಿಗೆ ವ್ಯವಹರಿಸುವ ಪ್ರತಿಯೊಂದು ಪ್ರಾರಂಭದ ಭಾಗಕ್ಕಾಗಿ ಸೂಚನೆಯಂತೆ ಕಾರ್ಯ ನಿರ್ವಹಿಸುತ್ತದೆ, ಮತ್ತು ಇದನ್ನು **ಯಾವಾಗ** ಅಥವಾ "ಯಾವಾಗಲಾದರು" (6:2, 5, 16) ಎಂದು ಅನುವಾದಿಸಲಾಗಿದೆ. ತನ್ನ ಕೇಳುಗರು ಈಗಾಗಲೆ ಉಚಿತವಾಗಿ ಕೊಡುವದರಲ್ಲಿ, ಪ್ರಾರ್ಥಿಸುವದರಲ್ಲಿ, ಮತ್ತು ಉಪವಾಸ ಮಾಡುವದರಲ್ಲಿ ನಿರತರಾಗಿದ್ದರು ಎಂದು ಯೇಸು ಊಹಿಸಿಕೊಂಡರು. ಇಂಥಹ ಕಾರ್ಯಗಳು ಯೆಹೂದ್ಯ ಜನರಿಂದ ನಿರೀಕ್ಷಿಸಲಾಗಿತ್ತು.

**ಬಡವರಿಗೆ ಕೊಡು** *eleēmosunē,* ಎಂದು ಅನುವಾದಿಸಿರುವ ಪದವು ಸಾಮಾನ್ಯ ವಾಗಿ ಕರುಣೆಯ ಮತ್ತು ಅನುಕಂಪ ತೋರಿಸುವ ಯಾವುದೇ ಕಾರ್ಯಮಾಡುವದಕ್ಕೆ ಸೂಚಿಸಬಹುದಾಗಿದೆ. ಇದು ಕೇವಲ ಸಹನೂಭೂತಿ ಮಾತ್ರ ತೋರಿ ಸುವದಲ್ಲ, ಆದರೆ ಸಮಸ್ಯೆಯಲ್ಲಿರುವವರನ್ನು ಬಿಡಿಸಲು ನಿಷ್ಕಪಟವಾದ ಕಾರ್ಯಗಳನ್ನು ಮಾಡಬೇಕಾಗಿದೆ. ಯಾಕೋಬನ ಪ್ರಕಾರ, ಕೆಲವೊಬ್ಬರು ಅವಶ್ಯಕತೆಯಲ್ಲಿರುವವರಿಗೆ ಕೇವಲ ಉತ್ತಮ ಅನಿಸಿಕೆಗಳು ಸಾಲದು. ಒಬ್ಬ ಕ್ರೈಸ್ತನು ತನ್ನ ಪ್ರೀತಿಯ ಕಾರ್ಯಗಳಿಂದ ಸಮಸ್ಯೆಗಳನ್ನು ಶಮನಗೊಳಿಸಲು ಹುಡುಕುತ್ತಾನೆ (ಯಾಕೋಬ 2:14-16).

ಸದ್ಯದ ಸನ್ನಿವೇಶದಲ್ಲಿ ಕೊಡುವ, *eleēmosunē,* ಎನ್ನುವ ಶಬ್ದವನ್ನು ವಿಶೇಷವಾಗಿ ಯೆಹೂದ್ಯರು ಬಡವರಿಗೆ "ದಾನ ಧರ್ಮ"ವನ್ನು ಮಾಡುವ ಆಚಾರವನ್ನು (KJV; NRSV) ಹೊಸ ಒಡಂಬಡಿಕೆ ಸೂಚಿಸುತ್ತದೆ. KJV ಮತ್ತು NRSV ಸಹಜವಾಗಿ ಹೊಸ ಒಡಂಬಡಿಕೆಯಲ್ಲಿ "ದಾನ" ("alms") ಎಂದು ಎಲ್ಲಾ ಕಡೆ ಭಾಷಾಂತರಿಸಲಾಗಿದೆ (ಲೂಕ 11:41; 12:33; ಅಪೊಸ್ತಲರ ಕೃತ್ಯಗಳು 3:2; 9:36; 10:2; 24:17). Michael J. Wilkins ಹೀಗೆ ವ್ಯಾಖ್ಯಾನಿಸಿದ್ದಾರೆ. "ಹಿಂದಿನ ಕಾಲದಲ್ಲಿ ಕೃಷಿಯ ಹಿನ್ನಲೆ ಹೊಂದಿರುವ ಸಮಾಜದಲ್ಲಿ ಬಡತನವು ವಿಸ್ತಾರವಾಗಿತ್ತು, ಮತ್ತು ಇಸ್ರಾಯೇಲ ಜನರು ಗಂಭೀರವಾಗಿ ಬಡವರಿಗೆ ಉಪಕಾರ

ಸೇವೆ ಮಾಡುವ ಹೊಣೆ ಹೊತ್ತುಕೊಂಡರು (cf. ಧರ್ಮೋಪದೇಶಕಾಂಡ 15:11).”[2]

**ಜನರಿಂದ ಹೊಗಳಿಸಿಕೊಳ್ಳಬೇಕೆಂದು** ಎನ್ನುವ ಉದ್ದೇಶದಿಂದ ಬಡವರಿಗೆ ಕೊಡುವದನ್ನು ಯೇಸು ಖಂಡಿಸುತ್ತಿದ್ದಾನೆ. ಯೆಹೂದ್ಯರಲ್ಲಿ ಉಚಿತವಾಗಿ ಕೊಡುವದನ್ನು ರಬ್ಬಿಗಳು ದುರುಪಯೋಗಪಡಿಸಿಕೊಂಡು ಕೊಡುವದರಿಂದ ರಕ್ಷಣೆ ಕೊಂಡುಕೊಳ್ಳಬಹುದೆಂದು ಅನೇಕರು ನಂಬಿದ್ದರು. “ದಾನ ಧರ್ಮದ ರೂಪದಲ್ಲಿ ಕೊಡುವದು ಪ್ರಾಣವನ್ನು ಕಾಪಾಡುತ್ತದೆ ಮತ್ತು ಎಲ್ಲಾ ಪಾಪದಿಂದ ಶುದ್ಧಿಗೊಳಿಸುತ್ತದೆ”[3] ಎಂದು ಅಪ್ರಮಾಣಿಕ ಗ್ರಂಥಗಳಲ್ಲಿ ಒಂದಾದ Tobit ಹೇಳುತ್ತದೆ.

ಕೊಡುವದರಲ್ಲಿ ಕಪಟಿಯಂತೆ ತೋರಿಸಿಕೊಳ್ಳಲು ವಿರುದ್ಧವಾಗಿ ಯೇಸು ತನ್ನ ಶಿಷ್ಯರಿಗೆ ಎಚ್ಚರಿಸಿದನು. ಅವರು ತಮ್ಮ ಮುಂದೆಯೇ **ತುತ್ತೂರಿ ಧ್ವನಿಯಲ್ಲಿ** ದೇವಾಲಯಗಳಲ್ಲಿ ಮತ್ತು **ಬೀದಿಗಳಲ್ಲಿಯೂ ಊದಿಸಿಕೊಳ್ಳುವರು** ಎಂದು ಸಹ ಹೇಳಿದನು. ಶ್ರೀಮಂತ ಫರಿಸಾಯರು ದಾನವನ್ನು ಕೊಡುವಾಗ ಅವರು ತುತ್ತೂರಿ ಧ್ವನಿಯನ್ನು ಮಾಡುತ್ತಿದ್ದರು ಇದರಿಂದ ಅವರು ಗುರುತಿಸಲ್ಪಟ್ಟು ಜನರಿಂದ ಗೌರವಿಸಲ್ಪಟ್ಟರೋ? ಎಂದು ನಾವು ಅದನ್ನು ಅಕ್ಷರಾರ್ಥ ವ್ಯಾಖ್ಯಾನವೆಂದು ನೋಡಬೇಕೋ? ಆ ರೀತಿಯಲ್ಲಿ ಕೆಲವರು ಯೋಚಿಸುತ್ತಾರೆ. ದಾನ ಧರ್ಮವನ್ನು ಕೊಡುವಾಗ ಆ ಸಮಯದಲ್ಲಿ ದೇವಾಲಯದಲ್ಲಿ ತುತ್ತೂರಿ ಊದಲ್ಪಡುತಿತ್ತು ಎಂದು ಕೆಲವರು ಹೇಳಿದ್ದಾರೆ. ಹದಿಮೂರನೆಯ *shofar* ಪೆಟ್ಟಿಗೆ (*shopar,* ಇಬ್ರಿಯಾ ಇದರ ಅರ್ಥ “ಕೊಂಬು”) ಉದಾರ ದಾನ ಧರ್ಮ ಸಂಗ್ರಹಿಸಲು ಅವರಾಗಿಯೇ ಆ ತುತ್ತೂರಿಯನ್ನು (ಟಗರಿನ ಕೊಂಬಿನಂತೆ) ಅದನ್ನು ರೂಪಗೊಳಿಸಿದ್ದರು.[4] ಅದು ಉದ್ದವಾದ ಕುತ್ತಿಗೆಯ ಭಾಗದಲ್ಲಿ ಡೊಂಕಾಗಿದ್ದು ಹಾಕಿರುವ ಹಣವನ್ನು ಕಳ್ಳರು ಕದಿಯುವದನ್ನು ತಪ್ಪಿಸಲು ಅದನ್ನು ರೂಪಗೊಳಿಸಿದ್ದರು. ಅದರಲ್ಲಿ ನಾಣ್ಯಗಳನ್ನು ಹಾಕುವಾಗ ಅಂಕುಡೊಂಕಾದ ಕುತ್ತಿಗೆಯ ಭಾಗದಲ್ಲಿ ಬಿದ್ದು ಜಾರಿಕೊಂಡು ಹೋಗುವಾಗ ಆ ಶಬ್ದದಿಂದ ಜನರ ಗಮನವನ್ನು ಸೆಳೆಯುವಂಥಾಗುತ್ತಿತ್ತು. ಆ ನಾಣ್ಯದ ಶಬ್ದವು ಎಷ್ಟು ಹಣವನ್ನು ಹಾಕಿದ್ದಾರೆಂದು ಸೂಚಿಸುತ್ತಿತ್ತು (ನೋಡಿರಿ ಲೂಕ 21:1, 2).

*ವೈಯಕ್ತಿಕವಾಗಿ* ಯಾರಾದರು ದಾನವನ್ನು ಕೊಡುವಾಗ ತುತ್ತೂರಿ ಊದಿರುವದಕ್ಕೆ ನಮಗೆ ಬೈಬಲ್ ಹೊರಗಿನ ಸಾಕ್ಷಾಧಾರಗಳು ನಮ್ಮಲ್ಲಿ ಇಲ್ಲ. ಬಹುಶಃ ಜನರನ್ನು ತಮ್ಮ ಕಡೆಗೆ ಆಕರ್ಷಿಸಿಕೊಳ್ಳುವದನ್ನು ಹೆಚ್ಚಿನ ಅಲಂಕಾರಿಕವಾಗಿ ನಮ್ಮ ಕರ್ತನು ವಿವರಿಸಿದ ಚಿತ್ರವಾಗಿತ್ತು. ಅವರು ಕೊಡುವಾಗ ಅವರೇ ಆಕರ್ಷಿಸಲ್ಪಟ್ಟವರಾಗಿ ಕೊಡಬೇಕು. ಇದು Jack P. Lewis ಮುಕ್ತಾಯ ಮಾಡಿದಂತೆಯೇ ಇರಬಹುದು, “‘ನಿನ್ನ ತುತ್ತೂರಿ ಕೊಂಬು ನೀನೇ ಊದಿದಂತೆ’[5] ಎನ್ನುವ ರೂಪಕೋಕ್ತಿಯಲ್ಲಿ ವ್ಯಕ್ತಪಡಿಸಲಾಗಿದೆ.” ಅದು “ವರ್ಷದ ಮೂರನೆ ಋತುವಿನಲ್ಲಿ ಮಳೆಗಾಗಿ ಜನರು ಉಪವಾಸವಿದ್ದವರಿಗೆ ದಾನ ಧರ್ಮಕೊಟ್ಟು ಕೊಂಬುಗಳನ್ನು ಊದಿದ ವಾಸ್ತವಿಕತೆಯಿಂದ ತೆಗೆದುಕೊಳ್ಳಲಾಯಿತೆಂದು”[6] ಆ ವ್ಯಕ್ತಪಡಿಸುವಿಕೆ ಸೂಚಿಸುತ್ತದೆಂದು ಆತನು ಆಲೋಚಿಸಿದ್ದಾನೆ.

ಇತರರಿಗೆ ಪ್ರಭಾವ ಬೀರಲು ಉದಾರವಾಗಿ ಕೊಡುವಂಥವರನ್ನು ಯೇಸು ಕಪಟಿಗಳು ಎಂದು ಸೂಚಿಸುತ್ತಾನೆ. “ಕಪಟಿ” (**hypocrites**) ಎನ್ನುವ ಶಬ್ದವು ಗ್ರೀಕ್ ಶಬ್ದವಾಗಿರುವ *hupokritēs* ನಿಂದ ಅನುವಾದವಾಗಿದೆ, ಇದರ ಮೂಲ ಅರ್ಥ “ನಟನೆ ಮಾಡುವವನು” ಎಂದು ಸೂಚಿತವಾಗಿದೆ. ಯೇಸು ನಾಟಕ ರಂಗಸ್ಥಳದ ಕುರಿತು ಅರಿತಿದ್ದನು. ನಜರೇತಿನಿಂದ ಕೆಲವು ಮೈಲುಗಳ ದೂರದಲ್ಲಿದ್ದ ಅನ್ಯರ ಪಟ್ಟಣ Sepphorisದಿಂದ ಒಬ್ಬನು ನಿಶ್ಚಯವಾಗಿ ಪರಿಚಯವಾಗಿದ್ದನು. ಹಾಗಿದ್ದರೂ, ಮೊದಲು ಯೆಹೂದ್ಯರ ಮಧ್ಯದಲ್ಲಿ ವೇಷದಾರರಿಗೆ *hupokritēs* ಎನ್ನುವ ಪದವನ್ನು ಉಪಯೋಗಿಸುತ್ತಿದ್ದರು.[7] “ಅವರಲ್ಲಿನ ಭ್ರಷ್ಟತನವನ್ನು ಮತ್ತು ತಮ್ಮನ್ನು ಮುಚ್ಚಿಡುವಂತೆ ಬಾಹ್ಯದ ನೀತಿ ಕಾರ್ಯಗಳೆಂಬ ಪರದೆ ಹಾಕಿಕೊಂಡು ಅವುಗಳನ್ನು [ಈ ಜನರು] ಮಾಡುತ್ತಿದ್ದರು. ವಿಶೇಷವಾಗಿ ಇಲ್ಲಿ, ಅವರ ಕಪಟಾಚರಣೆ, ಅಂದರೆ *ಸರಿಯಾದ*

*ಕಾರ್ಯಗಳನ್ನು ತಪ್ಪಾದ ಕಾರಣಗಳಿಗೋಸ್ಕರ ಮಾಡುವಂಥದ್ದು.*"[8] "ಕಪಟ" ಎಂಬ ಈ ಶಬ್ದ ನೀತಿಗೆ ಸಂಬಂಧಿಸಿದ ಪ್ರತಿಯೊಂದು ಭಾಗದ ಪ್ರಾರಂಭದಲ್ಲಿ ಕಾಣಿಸುತ್ತದೆ (6:2, 5, 16), ಮತ್ತಾಯನಲ್ಲಿ ಅನೇಕ ಸಾರಿ ಕಾಣಿಸುತ್ತದೆ (7:5; 15:7; 22:18; 23:13, 15, 23, 25, 27, 29; 24:51).

ಜನರು ಕೇವಲ ಕೊಡುವಾಗ ಅವರು ಗುರುತಿಸಲ್ಪಡುವರು, ನಂತರ **ಅವರಿಗೆ ಅವರ ಸಂಪೂರ್ಣ ಬಹುಮಾನ ದೊರಕುವದು** ಎಂದು ಯೇಸು ಹೇಳಿದನು. "ಅವರಿಗೆ ... ಸಂಪೂರ್ಣ" ದೊರಕುವದು ಎಂಬ ಪದವು ಗ್ರೀಕ್ ಪದವಾಗಿರುವ *apechō* ಎನ್ನುವ ಶಬ್ದದಿಂದ ಅನುವಾದಿಸಲಾಗಿದೆ. ಹಿಂದಿನ ಕಾಲದಲ್ಲಿ ಲೆಕ್ಕದ ಪದವಾಗಿ ಸ್ವಿಕೃತ ಪತ್ರದ ಕೆಳಗೆ "ಸಂಪೂರ್ಣವಾಗಿ ಕೊಟ್ಟಿದೆ" ಎಂಬ ಅರ್ಥದೊಂದಿಗೆ ಇದನ್ನು ಬರೆಯುತ್ತಿದ್ದರು (ನೋಡಿರಿ ಫಿಲಿಪ್ಪಿ 4:18; NRSV).[9] ಜನರ ಗುರುತಿಸುವಿಕೆಯನ್ನು ಕಪಟಿಗಳು ಸ್ವೀಕರಿಸಿರುವದೇ ಅವರ ಬಹುಮಾನವಾಗಿರುವುದೆಂದು ಯೇಸು ಹೇಳಿದ್ದಾನೆ. ಅವರು ಪರಲೋಕದಲ್ಲಿರುವ ತಂದೆಯಿಂದ ಏನಾದ್ರು ಹೊಂದುವೆವೆಂದು ನಿರೀಕ್ಷಿಸದಿರಲಿ.

**ವಚನ 3.** ಈ ಅಂಶವನ್ನು ಒತ್ತಿ ಹೇಳುವದಕ್ಕಾಗಿ, ಯೇಸು ಹೇಳಿದ್ದು, **ಧರ್ಮಕೊಡುವಾಗ ನೀನು ಧರ್ಮಕೊಟ್ಟದ್ದು ಅಂತರಂಗವಾಗುವ ಹಾಗೆ ನಿನ್ನ ಬಲಗೈ ಮಾಡಿದ್ದು ಎಡಗೈಗೂ ತಿಳಿಯದಿರಲಿ.** ಈ ಎಚ್ಚರಿಕೆಯನ್ನು ಒಂದು ಗಾದೆ ಹೇಳಿದಂತೆಯೆ ಅರ್ಥಮಾಡಿಕೊಳ್ಳಬೇಕು ಅದೇನೆಂದರೆ ಕೊಡುವದು ಸಾಧ್ಯವಾದಷ್ಟು ಎಚ್ಚರಿಕೆಯಿಂದ ಮಾಡಬೇಕು. ಈ ವಿವೇಚನೆಯನ್ನು ಒತ್ತಿ ಹೇಳುತ್ತಾ, Robert H. Gundry ರವರು ಭಿನ್ನವಾದ ಅವಲೋಕನದ ಅಂಶಗಳನ್ನು ಹೇಳಿದ್ದಾರೆ: "ಬಹುಶಃ ಹೇಳಿಕೆಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬಹುದು: ಬಹುಮಾನವು ಒಂದು ಮುಚ್ಚಿರುವ ಲಕೋಟೆಯೊಳಗೆ ಹೊರಗೆ ಕಾಣಿಸದಂತೆ ಸ್ವೀಕರಿಸುವವನ ಕೈಗೆ ಕೊಡುವವರು ತಮ್ಮ ಬಲಗೈಯಿಂದಲೆ ಕೊಡಬೇಕು, ಎರಡು ಕೈಗಳನ್ನು ಜೋಡಿಸಿ ಅಲಂಕಾರದಿಂದ ರಚನೆಮಾಡಿ ಹತ್ತಿರದಲ್ಲಿರುವವರ ಗಮನ ಸೆಳೆಯುವಂತೆ ಕೊಡಬಾರದು."[10]

**ವಚನ 4.** ನಿಷ್ಕಪಟವಾಗಿ ಒಳ್ಳೆಯದನ್ನು ಮಾಡುವದಕ್ಕಾಗಿ ಮತ್ತು ದೇವರನ್ನು ಮೆಚ್ಚಿಸಲು ಕೊಡುವವನು **ರಹಸ್ಯವಾಗಿ** ಅದನ್ನು ಮಾಡುವನು, ಮತ್ತು ದೇವರು ಅದಕ್ಕಾಗಿ ಅವನನ್ನು ಆಶೀವರ್ದಿಸುವನು. "ರಹಸ್ಯವಾಗಿ" ಅಂದರೆ ಕಪಟಿಗಳು ಇತರರಿಗೆ ಆಕರ್ಷಿಸಲು ಮಾಡಿದಂತೆ ಮಾಡುವದಲ್ಲ. ರಹಸ್ಯವಾಗಿ **ಕೊಡುವದರ** ಕುರಿತು ಯೇಸುವಿನ ಬೋಧನೆಯು ಯೆಹೂದ್ಯರಿಗೆ ಹೊಸದಾಗಿರಲಿಲ್ಲ. Mishnah ಪ್ರಕಾರ, ದೀನವಾಗಿರುವ ಯೆಹೂದ್ಯನು ಉದಾರ ದಾನವನ್ನು ವೈಯಕ್ತಿಕವಾಗಿ ಕೊಡಬಹುದಾಗಿತ್ತು. ತಾನು ಆಕರ್ಷಣೆಗೆ ಒಳಗಾಗದಂತೆ ಕೊಡಲು ದೇವಾಲಯದಲ್ಲಿ ಒಂದು ರಹಸ್ಯ ಸ್ಥಳವಿತ್ತು, ಆತನ ಕಾಣಿಕೆ ಭಕ್ತಿಯಿಂದ ಕೂಡಿದ ಬಡ ಕುಟುಂಬಕ್ಕೆ ಸಹಾಯವಾಗುತ್ತದೆ.[11] "ಉದಾರವಾಗಿ ರಹಸ್ಯವಾಗಿ ಕೊಡುವ ಮನುಷ್ಯನು ನಮ್ಮ ಬೋಧಕನಾದ ಮೋಶೆಗಿಂತಲು ಶ್ರೇಷ್ಟನಾಗಿದ್ದಾನೆ ಎಂದು ತಲ್ಮಾಂಡ್ ಬೋಧಿಸುತ್ತದೆ."[12] "ಕೊಡುವವನು ಯಾರಿಗೆ ಕೊಡುತ್ತೇನೆಂದು ತಿಳಿದಿರಬಾರದು ಮತ್ತು ಸ್ವೀಕರಿಸುವವನು ಯಾರಿಂದ ಸ್ವೀಕರಿಸುತ್ತಾನೆಂದು ತಿಳಿದಿರಬಾರದು"[13] ಎಂದು ಸಹ ಹೇಳಲಾಗುತ್ತದೆ.

ಹಾಗಿದ್ದರೂ, ಯೇಸು ಹೇಳಿರುವದು, ಎಲ್ಲಾ ಕೊಡುವಂಥವುಗಳು ರಹಸ್ಯವಾಗಿರಬೇಕೆಂದು ಅದರ ಅರ್ಥವಲ್ಲ. "ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೆ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು" ಎಂದು ಆತನು ಈಗಾಗಲೇ ಹೇಳಿದ್ದಾನೆ (5:16). ಒಳ್ಳೆಯ ಕಾರ್ಯಗಳು ತಮ್ಮನ್ನು ಹೊಗಳುವ ಉದ್ದೇಶಕ್ಕಾಗಿ ಮಾಡಬಾರದು ಎಂದು ಆತನ ಬೋಧನೆ ಆಗಿತು. ಅವರು ಯಾವುದೇ ಗುರುತಿಸುಕೊಳ್ಳುವಿಕೆಗಾಗಿ ಮಾಡಬಾರದು; ಆದರೆ ಅದನ್ನು ಇತರರು ಗಮನಿಸಿದರೆ, ದೇವರು

ಮಹಿಮೆ ಹೊಂದುತ್ತಾನೆ. ಒಳ್ಳೆಯದನ್ನು ಮಾಡುವ ಪ್ರಚಾರವನ್ನು ಯೇಸು ಖಂಡಿಸುತ್ತಿಲ್ಲ, ಆದರೆ ಪ್ರಚಾರಕ್ಕಾಗಿ ಮಾತ್ರ ಒಳ್ಳೆಯದನ್ನು ಮಾಡುವ ಉದ್ದೇಶವನ್ನು ಆತನು ಅದನ್ನು ಖಂಡಿಸುತ್ತಿದ್ದಾನೆ.

ಕೊಡುವದು ಮನುಷ್ಯರ ಪದವಿಗಾಗಿ ಮಾಡಬಾರದು, ಆದರೆ ದೇವರಿಂದ ಬರುವ ಬಹುಮಾನಕ್ಕಾಗಿ ಮಾಡಬೇಕು: **ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು.** ದೇವರು ಸರ್ವಜ್ಞಾನಿಯಾಗಿದ್ದಾನೆ, ಆತನ ಜನರಿಂದ ಉದಾರವಾಗಿ ಕೊಡುವ ಎಲ್ಲಾ ಕಾರ್ಯಗಳು "ನೋಡುವನು" ಮತ್ತು ಆತನು ತನ್ನ "ಫಲವನ್ನು" ಕೊಡುವನು.

## ಪ್ರಾರ್ಥಿಸುವದು (6:5-15)

### ಕಪಟಿಗಳಂತೆ ಅಲ್ಲ (6:5-8)

**5ಮತ್ತು ನೀವು ಪ್ರಾರ್ಥನೆಮಾಡುವಾಗ ಕಪಟಿಗಳ ಹಾಗೆ ಮಾಡಬೇಡಿರಿ. ಜನರು ನೋಡಬೇಕೆಂದು ಅವರು ಸಭಾಮಂದಿರಗಳಲ್ಲಿಯೂ ಬೀದೀಚೌಕಗಳಲ್ಲಿಯೂ ನಿಂತುಕೊಂಡು ಪ್ರಾರ್ಥನೆಮಾಡುವದಕ್ಕೆ ಇಷ್ಟಪಡುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. 6ಆದರೆ ನೀನು ಪ್ರಾರ್ಥನೆಮಾಡಬೇಕಾದರೆ ನಿನ್ನ ಏಕಾಂತವಾದ ಕೋಣೆಯೊಳಗೆ ಹೋಗಿ ಬಾಗಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆಮಾಡು; ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು. 7ಆದರೆ ಪ್ರಾರ್ಥನೆಮಾಡುವಾಗ ಅಜ್ಞಾನಿಗಳ ಹಾಗೆ ಹೇಳಿದ್ದನ್ನೇ ಸುಮ್ಮಸುಮ್ಮನೆ ಹೇಳಬೇಡ; ಅವರು ಬಹಳ ಮಾತುಗಳನ್ನಾಡಿದರೆ ತಮ್ಮ ಪ್ರಾರ್ಥನೆಯನ್ನು ದೇವರು ಕೇಳುತ್ತಾನೆಂದು ನೆನಸುತ್ತಾರೆ. 8ಆದದರಿಂದ ನೀವು ಅವರ ಹಾಗೆ ಆಗಬೇಡಿರಿ; ನೀವು ನಿಮ್ಮ ತಂದೆಯನ್ನು ಬೇಡಿಕೊಳ್ಳುವದಕ್ಕಿಂತ ಮುಂಚೆಯೇ ನಿಮಗೆ ಏನೇನು ಅಗತ್ಯವೆಂಬುದು ಆತನಿಗೆ ತಿಳಿದದೆ.**

ಯೇಸು ಮುಂದೆ ಪ್ರಾರ್ಥನೆಯ ಕುರಿತು ಯಾವುದು ಸರಿ ಮತ್ತು ಯಾವುದು ತಪ್ಪು ಎಂದು ಹೇಳಿದ್ದಾನೆ. ಪ್ರಾರ್ಥನೆ ಮಾಡುವದು ಸರಿ, ಆದರೆ "ಕಪಟಿಗಳು" ಮಾಡಿದಂತೆ ಮಾಡುವದು ತಪ್ಪು ಸಾರ್ವಜನಿಕರ ಆರಾಧನೆಯನ್ನು ಕೇವಲ ಗದರಿಸುವದನ್ನು ನೋಡಲು ನಾವುಗಳು ಇಲ್ಲಿ ಇಲ್ಲ. ಇತರರ ಮುಂದೆ ನಮ್ಮ ಪ್ರಾರ್ಥನೆ ಜಂಬದಿಂದ ತೋರಿಸುವ ಈ ಶೋಧನೆಯ ವಿರುದ್ಧವಾಗಿ ಯೇಸು ಎಚ್ಚರಿಸುತ್ತಿದ್ದಾನೆ.[14]

**ವಚನ 5. ನೀವು ಪ್ರಾರ್ಥನೆ ಮಾಡುವಾಗ** ಎಂದು ಹೇಳುತ್ತಾ ಯೇಸು ಪ್ರಾರಂಭಿಸಿದ್ದಾನೆ. ಪ್ರತಿದಿನ ನಿಗದಿ ಮಾಡಿದ ಸಮಯಕ್ಕೆ ಪ್ರಾರ್ಥಿಸುವ ಯೆಹೂದ್ಯರಿಗೆ ಯೇಸು ಹೇಳಿದನು. ಬೆಳಗಿನ ಮತ್ತು ಸಾಯಂಕಾಲದ ತ್ಯಾಗ ಸಮರ್ಪಣೆಯು ಪ್ರಾರ್ಥನೆಯೊಂದಿಗೆ ಮಾಡಲಾಗುತ್ತಿತ್ತು. ಇದನ್ನು ಮೂರನೆ ಅವದಿ (9:00 a.m.)ಗೆ ಮತ್ತು ಒಂಭತ್ತನೆ ಅವಧಿ (3:00 p.m.)ಗೆ ಮಾಡುತ್ತಿದ್ದರು (ಎಜ್ರನು 9:5; ದಾನಿಯೇಲ 9:21; ಲೂಕ 1:10; ಅಪೊಸ್ತಲರ ಕೃತ್ಯಗಳು 3:1).[15] ಆರನೇ ಅವಧಿಗೂ ಪ್ರಾರ್ಥನೆಯು ಸಹ ಮಧ್ಯಾಹ್ನ ಮಾಡುತ್ತಿದ್ದರು (ಅಪೊಸ್ತಲರ ಕೃತ್ಯಗಳು 10:9). ಆದದರಿಂದ, ಒಂದು ದಿನದಲ್ಲಿ ಮೂರು ಸಾರಿ ಪ್ರಾರ್ಥಿಸುವದು ಆಚರಣೆಯಾಗಿತ್ತು (ಕೀರ್ತನೆ 55:17; ದಾನಿಯೇಲ 6:10). ಮೊದಲಿನ ಕ್ರೈಸ್ತರಲ್ಲಿ ಕೆಲವರು ಈ ಆಚಾರದಲ್ಲಿ ಮುಂದುವರಿದರು.[16]

**ಕಪಟಿಗಳ ಹಾಗೆಯೇ ಮಾಡಬೇಡಿರಿ** ಎಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು. "ಕಪಟಿಗಳು" ಎನ್ನುವದಕ್ಕೆ ಸ್ಪಷ್ಟ ಅರ್ಥವನ್ನು ಮತ್ತಾಯ 23ರಲ್ಲಿ ಒದಗಿಸಿದ್ದಾನೆ: "ಶಾಸ್ತ್ರಿಗಳೂ, ಫರಿಸಾಯರೂ, ಮೋಶೆಯ ಪೀಠದಲ್ಲಿ ಕೂತುಕೊಂಡಿದ್ದಾರೆ; ಆದದರಿಂದ ಅವರು ನಿಮಗೆ

ಏನೇನು ಹೇಳುತ್ತಾರೋ ಅದನ್ನೆಲ್ಲಾ ಮಾಡಿರಿ, ಕಾಪಾಡಿಕೊಳ್ಳಿರಿ; ಆದರೇ ಅವರ ನಡತೆಯ ಪ್ರಕಾರ ನಡೆಯಬೇಡಿರಿ; ಅವರು ಹೇಳುತ್ತಾರೇ ಹೊರತು ನಡೆಯುವದಿಲ್ಲ" (23:2, 3). "ಅವರು ಬೋಧಿಸಿದಂತೆ ನಡೆದುಕೊಳ್ಳುವದಿಲ್ಲ" ಎಂದು NIVಯಲ್ಲಿ ಅನುವಾದ ಹೊಂದಿದೆ. ಯೇಸು ಅಲ್ಲಿರುವ ಯೆಹೂದ್ಯ ನಾಯಕರಿಗೆ ಅವರು ಬಾರವಾದ ಹೊರೆಗಳನ್ನು ಕಟ್ಟಿ ಜನರ ಹೆಗಲಿನ ಮೇಲೆ ಹೊರಿಸುತ್ತಾರೆ; ತಾವಾದರೋ "ಬೆರಳಿನಿಂದಲಾದರೂ ಅವುಗಳನ್ನು ಮುಟ್ಟಲೊಲ್ಲರು" (23:4) ಎಂದು ಹೇಳಿದನು. ಅವರ ಕಪಟತನದ ಉದ್ದೇಶಗಳ ಕುರಿತು ಮಾತಾಡಿದನು: "ಅವರು ತಮ್ಮ ಕೆಲಸಗಳನ್ನೆಲ್ಲಾ ಜನರಿಗೆ ಕಾಣಬೇಕೆಂದು ಮಾಡುತ್ತಾರೆ" (23:5).

ಇಲ್ಲಿಂದ ಯೆಹೂದ್ಯರು ಪ್ರಾರ್ಥಿಸುತ್ತಿರುವಾಗ ಅವರ ಕಪಟತನವನ್ನು ಬಹಳ ಸ್ಪಷ್ಟವಾಗಿ ಗಮನಿಸಬಹುದಾಗಿದೆ. **ಜನರು ನೋಡಬೇಕೆಂದು ಅವರು ಸಭಾಮಂದಿರಗಳಲ್ಲಿಯೂ ಬೀದಿ ಚೌಕಗಳಲ್ಲಿಯೂ ನಿಂತುಕೊಂಡು ಪ್ರಾರ್ಥನೆ ಮಾಡುವದಕ್ಕೆ ಇಷ್ಟಪಡುತ್ತಾರೆ** ಎಂದು ಕಪಟಿಗಳ ಕುರಿತು ಯೇಸು ಹೇಳಿದನು. ಯೆಹೂದ್ಯರು ಕೆಲವು ಸಾರಿ ನಿಂತುಕೊಂಡು ಮೇಲಕ್ಕೆ ನೋಡಿ ಕೈಗಳನ್ನು ಪರಲೋಕ ದೆಡೆಗೆ ಕೈಗಳನ್ನು ಚಾಚಿ ಪ್ರಾರ್ಥಿಸುತ್ತಿದ್ದರು (1 ಅರಸುಗಳು 8:22; ಕೀರ್ತನೆ 28:2; 63:4; 134:2; ಲೂಕ 18:11, 13). Robert H. Mounce ರವರ ಪ್ರಕಾರ, ಒಬ್ಬನು ತಕ್ಕ ಸಮಯಕ್ಕೆ ಪ್ರಾರ್ಥನೆಗೆ ದಾರಿಯಲ್ಲಿ ಇರುವುದಾದರೆ, "ಅವನು ಆಗಲೆ ಅದನ್ನು ನಿಲ್ಲಿಸಿ, ದೇವಾಲಯದ ಕಡೆಗೆ ತಿರುಗಿಕೊಂಡು ಪ್ರಾರ್ಥಿಸುವದು ಒಳ್ಳೆಯ ಸಮಯವಾಗಿದೆ"[17] ಬಹುಶಃ ಕಪಟಿಗಳು ಅವರು ಹೋಗುವ ಮಾರ್ಗದಲ್ಲಿ ಪ್ರಾರ್ಥನೆಗೆ ಸಮಯವಾಗುವಾಗ ಅವರು ಕಾಣಿಸುವಂಥಹ ಸ್ಥಳದಲ್ಲಿ ಇರುವಂತೆ ಯೋಜಿಸುತ್ತಿದ್ದರು.

ಈ ಜನರು ಬಹಿರಂಗವಾಗಿ ಪ್ರಾರ್ಥಿಸಲು ಇಷ್ಟಪಡುತ್ತಿದ್ದರು ಯಾಕೆಂದರೆ ಅವರು ಆತ್ಮೀಯ ಮನಸ್ಸುಳವರಾಗಿದ್ದಾರೆಂದು ಪ್ರಸಿದ್ಧಿ ತಂದು ಕೊಡುತ್ತಿತ್ತು. "ಧಾರ್ಮಿಕ ವ್ಯಕ್ತಿಯೆಂದು" ಗುರುತಿಸಿಕೊಳ್ಳುವದು ಅವರ ಇಚ್ಚೆಯಾಗಿತ್ತು. ಅವರಿಗೆ ಕುಪ್ರಸಿದ್ಧಿ ತರುವಂತಹ ವಿಷಯಗಳಿಗೆ ಅವರು ಗಮನ ಕೊಡುತ್ತಿದ್ದರು ಮತ್ತು ಅಂತಹ ಸಂದರ್ಭಗಳಲ್ಲಿ ಬಹಳಷ್ಟು ಶ್ರಮೆಯನ್ನು ಹಾಕುತ್ತಿದ್ದರು (ಲೂಕ 18:9-14). **ಅವರಿಗೆ ಬರತಕ್ಕ ಸಂಪೂರ್ಣ ಫಲವಿದೆ** ಎಂದು ಅಂತಹ ಜನರಿಗೆ ಯೇಸು ಹೇಳಿದನು. ಮನುಷ್ಯರ ಶ್ಲಾಘನಿಯೇ ಅವರ ಸಂಬಳವಾಗಿ ಪಡೆಯುವಂತದ್ದಾಗಿತ್ತು (ನೋಡಿರಿ 6:2ರ ವ್ಯಾಖ್ಯಾನ).

**ವಚನ 6.** ಭಿನ್ನವಾಗಿ, ಯೇಸು ತನ್ನ ಶಿಷ್ಯರಿಗೆ **ಏಕಾಂತದಲ್ಲಿ** ದೀನತೆಯಿಂದ **ಪ್ರಾರ್ಥಿಸಲು** ಮಾರ್ಗದರ್ಶನ ಮಾಡಿದನು. ಏಕಾಂತವಾದ **ಕೋಣೆ** (*tameion*) ಮನೆಯಲ್ಲಿರುವ ಒಂದು ಸಂಗ್ರಹ ಕೋಣೆಯನ್ನು ಸೂಚಿಸುತ್ತದೆ. ಮನೆಗಳು ಮಣ್ಣಿನ ಇಟ್ಟಿಗೆಯಿಂದ ಕಟ್ಟುತ್ತಿದ್ದರಿಂದ, ಕಳ್ಳರು ಅದರ ಗೋಡೆಗಳ ಮುಖಾಂತರ ಕೊರೆಯುತ್ತಿದ್ದರು (6:19) ಮತ್ತು ಮನೆಯಲ್ಲಾ ಸೂರೆ ಮಾಡುತ್ತಿದ್ದರು. ಆದುದರಿಂದ, ಬೀಗಹಾಕಲು **ಬಾಗಿಲಿರುವ** ಏಕಾಂತವಾದ ಕೊಣೆ ಇರುವದು ಮುಖ್ಯವಾದದ್ದಾಗಿದೆ.[18] ವೈಯಕ್ತಿಕವಾಗಿ ತಮ್ಮ ಹೃದಯದಿಂದ ಪ್ರಾರ್ಥನೆ ಮಾಡುವವರು, ರಹಸ್ಯವಾಗಿ ಮಾಡುವದೆಲ್ಲವನ್ನು ನೋಡುವ ಅವರ **ತಂದೆಯಿಂದ, ಫಲವನ್ನು** ಹೊಂದುವರು.

ಯೆಹೂದ್ಯರ ಸಭಾಮಂದಿರದ ಆರಾಧನೆಯಲ್ಲಿ ಮಾಡುವ ಪ್ರಾರ್ಥನೆಯನ್ನು ಅಥವಾ ಸಭೆಗಳ ಆರಾಧನೆಯಲ್ಲಿ ಮಾಡುವ ಪ್ರಾರ್ಥನೆಯನ್ನು ಯೇಸು ವಿರೋಧಿಸಲಿಲ್ಲ, ಆದರೆ ಅವರು ತೋರ್ಪಡಿಸಿಕೊಳ್ಳುವದಕ್ಕಾಗಿ ಮಾಡುವ ಪ್ರಾರ್ಥನೆಯನ್ನು ಆತನು ಗದರಿಸಿದನು. ಯೇಸು ವೈಯಕ್ತಿಕವಾಗಿ ಮತ್ತು ಸಾರ್ವಜನಿಕವಾಗಿ ಪ್ರಾರ್ಥಿಸಿದನು, ಮತ್ತು ಹೇಗೆ ಪ್ರಾರ್ಥಿಸಬೇಕೆಂದು ಯೇಸು ತನ್ನ ಶಿಷ್ಯರಿಗೆ ಬಹಿರಂಗವಾಗಿ ಕಲಿಸಿದನು (6:9-13).

**ವಚನ 7.** ಕಪಟಿಗಳು ಪ್ರಾರ್ಥನೆ ಮಾಡುವದನ್ನು *ನೋಡಬೇಕೆಂದು ಮಾತ್ರವಲ್ಲದೆ,* ಅವರ ಪ್ರಾರ್ಥನೆಯನ್ನು *ಕೇಳಬೇಕೆಂದು* ಆಶಿಸುತ್ತಿದ್ದರು. ಅವರು **ಹೇಳಿದ್ದನ್ನೇ ಸುಮ್ಮಸುಮ್ಮನೆ**

**ಬಹಳ ಮಾತುಗಳನ್ನು** ಪ್ರಾರ್ಥನೆಯಲ್ಲಿ ಉಪಯೋಗಿಸಿದರು. ಯೇಸು ಉದ್ದವಾದ ಪ್ರಾರ್ಥನೆಗಳನ್ನು ಖಂಡಿಸಲಿಲ್ಲ. ಕನಿಷ್ಟ ಒಂದು ಸಾರಿ, ಆತನೊಬ್ಬನೆ ರಾತ್ರಿಯೆಲ್ಲಾ ಪ್ರಾರ್ಥನೆ ಮಾಡಿದನು (ಲೂಕ 6:12). ಒಬ್ಬನು ಉದ್ದವಾಗಿ ಪ್ರಾರ್ಥನೆ ಮಾಡುವ ಗುಣ ಹೊಂದಿದ್ದಂತೆ ಆತನು ಉದ್ದವಾದ ಪ್ರಾರ್ಥನೆಗೆ ಆಸಕ್ತಿ ಹೊಂದಿರಲಿಲ್ಲ. ಪ್ರಾರ್ಥನೆಯು ವಾಕ್ಚತುರತೆ ಅಥವಾ ಶಿಕ್ಷಣ ತೋರಿಸುವಂಥದ್ದಾಗಬಾರದು.

ಯೇಸು ತನ್ನ ಶಿಷ್ಯರಿಗೆ ಪ್ರಾರ್ಥನೆಯು ಪುನರಾವರ್ತನೆ ಮಾಡುವದನ್ನು ವಿರೋಧಿಸಲಿಲ್ಲ. ಗೆತ್ಸೆಮನೆ ತೋಟದಲ್ಲಿ, ಆತನನ್ನು ಹಿಡುಕೊಡುವ ರಾತ್ರಿಯಲ್ಲಿ ಯೇಸು ಒಂದೇ ರೀತಿಯ ಪ್ರಾರ್ಥನೆ ಮೂರು ಸಾರಿ ಅವಶ್ಯವಾಗಿ ಮಾಡಿದನು (26:36-46). ಪುನಃ ಪುನಃ ಹೇಳುವದನ್ನು ಆತನು ಖಂಡಿಸುವ ಬದಲಾಗಿ ಪ್ರಾರ್ಥನೆ ಮಾಡುವವನ ಹೃದಯದಿಂದ ಬಾರದೆ ಇರುವ ಪುನರಾರ್ವನಾ ಮಾತುಗಳನ್ನು ಆತನು ಗದರಿಸುತ್ತಿದ್ದಾನೆ. "ಅರ್ಥವಿಲ್ಲದ ಪುನರಾವರ್ತನೆ"ಗೆ ಉಪಯೋಗಿಸಿರುವ ಗ್ರೀಕ್ ಪದವು (*battalogeō*) "ಅಪ್ರಯೋಜಕ, ಉಪಯೋಗದ ಹರಟೆ" ಎಂದು ಅರ್ಥಗಳನ್ನು ಕೊಡುತ್ತದೆ. ಯೇಸು ತನ್ನ ಮಾತುಗಳನ್ನು ಪುನರಾವರ್ತನೆ ಮಾಡಿದ್ದಾಗ್ಯೂ, ಆತನು ವೈಯಕ್ತಿಕವಾಗಿ ಪ್ರಾರ್ಥನೆಯಲ್ಲಿ ಚಿತ್ತ ಶುದ್ಧಿಯುಳ್ಳವನಾಗಿದ್ದನು. ಅವರ ಪ್ರಾರ್ಥನೆ ಕೇಳುವದಕ್ಕಾಗಿ ದೇವರನ್ನು ತಮ್ಮ ಮಾತುಗಳೊಂದಿಗೆ ಪ್ರಭಾವ ಬೀರುವದರ ಕುರಿತು ಚಿಂತಿಸಿರುವ ವಿಷಯದ ವಿರುದ್ಧವಾಗಿ ತನ್ನ ಶಿಷ್ಯರಿಗೆ ಎಚ್ಚರಿಸಿದನು. ಮೊದಲನೆ ಶತಮಾನದಲ್ಲಿ, ಉದ್ದವಾದ ಪ್ರಾರ್ಥನೆಯು ಹೆಚ್ಚಾಗಿ ಇಷ್ಟಪಡುತ್ತಿದ್ದರು ದೇವರು ಅಂಥಹ ಪ್ರಾರ್ಥನೆ ಕೇಳುತ್ತಾನೆ ಮತ್ತು ಅದಕ್ಕೆ ಉತ್ತರಿಸುತ್ತಾನೆ ಎಂದು ರಬ್ಬಿಗಳು ಬೋಧಿಸುತ್ತಿದ್ದರು.[19]

**ಬಹಳ ಮಾತುಗಳನ್ನಾಡಿದರೆ** ದೇವರು ಪ್ರಾರ್ಥನೆಯನ್ನು ಕೇಳುತ್ತಾನೆಂದು **ಅನ್ಯಜನರು** ನಂಬಿದರು ಎಂದು ಯೇಸು ಹೇಳಿದನು. ವಿಗ್ರಹ ಆರಾಧಕ ಮತಾವಲಂಬಿಗಳು ಹೃದಯದ ನಡತೆಯನ್ನು ವಿರೋಧಿಸುತ್ತಿರುವಂತೆ ಆಗಾಗ ಅವರ ಸರಿಯಾದ ಧಾರ್ಮಿಕ ಕಾರ್ಯಗಳನ್ನು ಒತ್ತಿ ಹೇಳುತ್ತಿದ್ದರು. ಉದಾಹರಣೆಗೆ ಅವರ ಸ್ಪಷ್ಟತೆ *Keener* ನಲ್ಲಿ ಕಂಡುಕೊಳ್ಳಲಾಗಿದೆ: "ರೋಮನ್ ನ್ಯಾಯಾಧೀಶರು, ಸಂಪ್ರದಾಯದಂತೆ ಪಡೆದು ಕೊಂಡಂತೆ ಅವರು ಸ್ಪಷ್ಟವಾಗಿ ಓದುತ್ತಿದ್ದರು; 'ಒಂದೇ ಒಂದು ಸ್ವರ ಅಥವಾ ಒಂದು ಧಾರ್ಮಿಕ ಸೂಚನೆಯು ತಪ್ಪಾಗಿ ಮಾಡಿದರೆ, ಪ್ರಾರ್ಥನೆಯು ರದ್ದಾಗುತಿತ್ತು.'"[20] ಪ್ರಾರ್ಥನೆಯು ಆಗಾಗ ದೇವರುಗಳನ್ನು ದುರುಪಯೋಗಪಡಿಸಿಕೊಳ್ಳುವ ಕಾರ್ಯವಾಗಿತ್ತು ಎಂದು ಅವಲೋಕಿಸಲಾಗಿದೆ. "ನಿರಂತರವಾಗಿ ದೇವರ ಹೆಸರುಗಳನ್ನು ಪುನಃ ಪುನಃ ಹೇಳುವಾಗ ನಿಜವಾದ ದೇವರ ಹೆಸರಿಗೆ ಹೇಗೋ ಪ್ರಾರ್ಥಿಸುವಾಗ, ಅವರು ಆಶಿಸಿದ್ದನ್ನು ಸ್ವೀಕರಿಸುವರೆಂದು ಅನ್ಯಜನರು ನಂಬಿದ್ದರು"[21] ಎಂದು Mounce ರವರು ಹೇಳುತ್ತಾರೆ. ಹಳೆ ಮತ್ತು ಹೊಸ ಒಡಂಬಡಿಕೆಯಲ್ಲಿ ವಿಗ್ರಹ ಆರಾಧನೆಯ ಧಾರ್ಮಿಕ ಕಾರ್ಯಚರಣೆಯಲ್ಲಿ ಪುನರಾವರ್ತನೆ ಆಗಿರುವದನ್ನು ಕಾಣಬಹುದು: "ಬಾಳನ ಯಾಜಕರು 'ಬಾಳನೇ ನಮಗೆ ಕಿವಿಗೊಡು' ಎಂದು ಹೊತ್ತಾರೆಯಿಂದ ಮಧ್ಯಾಹ್ನದವರೆಗೆ ನಮಗೆ ಉತ್ತರ ಕೊಡು ಎಂದು ಕೂಗಿದರು (1 ಅರಸುಗಳು 18:26), ಮತ್ತು ಎಲ್ಲರೂ ಒಂದೇ ಶಬ್ದದಿಂದ 'ಎಫೆಸದವರ ಅರ್ತೆಮಿದೇವಿ ಮಹಾದೇವಿ' ಎಂದು ಎರಡು ಗಂಟೆ ಹೊತ್ತು ಕೂಗಿದರು (ಅಪೊಸ್ತಲರ ಕೃತ್ಯಗಳು 19:34)."[22]

**ವಚನ 8.** ಆತನ ಹಿಂಬಾಲಕರು **ಅವರಂತೆ** - ಅಂದರೆ ಅನ್ಯರಂತೆ (ಮತ್ತು ಕಪಟಿಗಳಂತೆ) ಆಗುವದು ಯೇಸುವಿಗೆ ಇಷ್ಟವಿರಲಿಲ್ಲ. ಇದೆಲ್ಲದರ ತರುವಾಯ, **ತಂದೆಯಾದ** ದೇವರಿಗೆ ಪ್ರಾರ್ಥನೆಯಲ್ಲಿ ನಾವು ಕೇಳುವದಕ್ಕಿಂತ ಮುಂಚೆ ತನ್ನ ಮಕ್ಕಳಿಗೆ ಏನೇನು ಬೇಕು ಎನ್ನುವದು ಆತನಿಗೆ ತಿಳಿದಿದೆ. ಪ್ರಾರ್ಥನೆ ಎಂದರೆ ಮಾಹಿತಿ **ಕೊಡುವದಲ್ಲ** ಅಥವಾ ದೇವರನ್ನು ದುರುಪಯೋಗ ಮಾಡುವದಲ್ಲ.[23] ಆತನ ಮಕ್ಕಳು ಘನತೆಯೊಂದಿಗೆ, ಆರಾಧನೆಯೊಂದಿಗೆ, ಮತ್ತು ಕೃತಜ್ಞತೆಯಿಂದ ಆತನ ಸಮೀಪಕ್ಕೆ ಬರಬೇಕು. ಪ್ರಾರ್ಥನೆಯಲ್ಲಿ ಒಬ್ಬನು ಎಲ್ಲಾ

ಉತ್ತಮವಾದ ಬಹುಮಾನಗಳನ್ನು ಕೊಡುವಾತನಾದ ದೇವರ ಮೇಲೆ ತನ್ನ ನಂಬಿಕೆ ತೋರಿಸುತ್ತಾನೆ (7:7-11; ನೋಡಿರಿ ಯಾಕೋಬ 1:17).

**ಮಾದರಿಯ ಪ್ರಾರ್ಥನೆ (6:9-13)**

> **9ಆದದರಿಂದ ನೀವು ಹೀಗೆ ಪ್ರಾರ್ಥನೆ ಮಾಡತಕ್ಕದ್ದು -**
> **10ಪರಲೋಕದಲ್ಲಿರುವ ನಮ್ಮ ತಂದೆಯೇ,**
> **ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ.**
> **ನಿನ್ನ ರಾಜ್ಯವು ಬರಲಿ.**
> **ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ**
> **ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ.**
> **11ನಮ್ಮ ಅನುದಿನದ ಆಹಾರವನ್ನು ಈ ಹೊತ್ತೂ ದಯಪಾಲಿಸು.**
> **12ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ,**
> **ನಮ್ಮ ತಪ್ಪುಗಳನ್ನು ಕ್ಷಮಿಸು.**
> **13ನಮ್ಮನ್ನು ಶೋಧನೆಯೊಳಗೆ ಸೇರಿಸದೆ**
> **ಕೇಡಿನಿಂದ ನಮ್ಮನ್ನು ತಪ್ಪಿಸು.**
> **[ಯಾಕೆಂದರೆ ರಾಜ್ಯ ಬಲವೂ**
> **ಮಹಿಮೆಯೂ ಸದಾಕಾಲವಿರಲಿ. ಆಮೇನ್.]**

ಯೆಹೂದ್ಯ ರಬ್ಬಿಗಳು ತಮ್ಮ ವಿದ್ಯಾರ್ಥಿಗಳಿಗೆ ಪ್ರಾರ್ಥಿಸುವದು ಹೇಗೆ ಎಂಬ ವಿಷಯ ಕಲಿಸುವದು ಸಾಮಾನ್ಯವಾಗಿತ್ತು. ಯೇಸುವಿನ ಶಿಷ್ಯರು "ಕರ್ತನೆ ಯೋಹಾನನು ತನ್ನ ಶಿಷ್ಯರಿಗೆ ಕಲಿಸಿದ ಹಾಗೆ ನಮಗೂ ಪ್ರಾರ್ಥನೆ ಮಾಡುವದನ್ನು ಕಲಿಸು ಎಂದು ಕೇಳಿದರು" (ಲೂಕ 11:1). ಯೇಸುವಿನ ಪ್ರಸಂಗದ ಈ ಭಾಗದಲ್ಲಿ ತನ್ನ ಶಿಷ್ಯರಿಗೆ ದೇವರಿಗೆ ಪ್ರಾರ್ಥನೆ ಮಾಡುವ ಮೂಲಾಂಶಗಳನ್ನು ಕಲಿಸಿದನು.

ಯೇಸು ಅವರಿಗೆ ಕಲಿಸಿದ ಪ್ರಾರ್ಥನೆ (ನೋಡಿರಿ ಲೂಕ 11:2-4) ಆಗಾಗ "ಕರ್ತನ ಪ್ರಾರ್ಥನೆ" ಎಂದು ಕರೆಯಲ್ಪಟ್ಟಿತ್ತು. ಇದನ್ನು ನಾವುಗಳು "ಶಿಷ್ಯರ ಪ್ರಾರ್ಥನ"! ಎಂದು ಕರೆಯುವದು ಎಷ್ಟೋ ಯುಕ್ತವಾಗಿದೆ. ಪ್ರಾರ್ಥನೆಯು ಅವರ ಪ್ರಯೋಜನಕ್ಕಾಗಿ ಕೊಡಲ್ಪಟ್ಟಿದೆ ಮತ್ತು ನಮ್ಮ ಕರ್ತನ ವೈಯಕ್ತಿಕ ಪ್ರಾರ್ಥನೆಗಳಲ್ಲಿ ಅಲ್ಲ (ನೋಡಿರಿ 26:36-46; ಯೋಹಾನ 17:1-26). ಯೇಸು ಹೇಗೆ ಪ್ರಾರ್ಥಿಸಬೇಕು ಎಂಬುದಕ್ಕೆ ಬೇಕಾಗಿರುವ ಮೂಲ ಅಂಶಗಳನ್ನು ಕೊಟ್ಟಿರುವದರಿಂದ ಇದನ್ನು "ಮಾದರಿಯ ಪ್ರಾರ್ಥನೆ" ಎಂದು ಸೂಚಿಸುವದು ಸರಿಯಾಗಿದೆ. ಈ ಮಾದರಿಯ ಪ್ರಾರ್ಥನೆಯು ಆಳವಾಗಿದೆ ಮತ್ತು ಸರಳವಾಗಿದೆ.

**ವಚನ 9. ಪರಲೋಕದಲ್ಲಿರುವ ನಮ್ಮ ತಂದೆಯೇ** ಎಂದು ದೇವರಿಗೆ ಯೇಸು ಪ್ರಾರ್ಥನೆ ಮಾಡಲು ಹೇಳಿ ಪ್ರಾರಂಭಿಸಿದನು. "ನನ್ನ ತಂದೆಯೇ" ಎಂದು ಕರೆಯಲು ಸಾಧ್ಯವಾಗಿದ್ದರು ಸಹ ಆತನು ಹಾಗೆ ಕರೆಯಲಿಲ್ಲ. ಆತನು "ನಮ್ಮ ತಂದೆಯೇ" ಎಂದು ಕರೆದನು. ಯೇಸು ಒಂದು ಅಸಾಧಾರಣವಾದ ರೀತಿಯಲ್ಲಿ ದೇವರ ಅದ್ವಿತಿಯ ಕುಮಾರನಾಗಿದ್ದನು (ಯೋಹಾನ 3:16), ಆದರೆ ಆತನ ಶಿಷ್ಯರು ದೇವರ ಆತ್ಮೀಯ ಮಕ್ಕಳಾಗಿದ್ದಾರೆ (ಯೋಹಾನ 1:11-13). ಆತನು ದೇವರಿಗೆ ಸಮೀಪಿಸಿದಂತೆ ತನ್ನ ಹಿಂಬಾಲಕರು ಹಾಗೆಯೇ ದೇವರಿಗೆ ಸಮೀಪಿ ಸಬೇಕು ಎಂದು ಹೇಳಿದ್ದನ್ನು ಸೂಚಿಸುತ್ತದೆ. ದೇವರು ತನ್ನ ಮಗನ ಆತ್ಮವನ್ನು ಮುಂಚಿತವಾಗಿ ಅವರ ಹೃದಯಗಳಲ್ಲಿ ಕಳುಹಿಸಿದನು ಮತ್ತು ಅವರು "ಅಪ್ಪಾ! ತಂದೆ!" ಎಂದು ಕೂಗ ಬಹುದೆಂದು (ರೋಮಾಪುರ 8:15) ಪೌಲನು ರೋಮನ ಸಹೋದರರಿಗೆ ಹೇಳಿದನು. ಮಗು ತನ್ನ ತಂದೆಯನ್ನು ಕರೆಯಲು "ಅಬ್ಬಾ" ಎಂಬ ಶಬ್ದವು ಅರೇಮಿಕ ಭಾಷೆಯಲ್ಲಿ ಉಪಯೋಗಿಸಲಾಗಿದೆ. ಇದು "ಡ್ಯಾಡಿ" ಎಂದು ಕೂಗುವಷ್ಟು ಪ್ರಸಿದ್ಧಿಯಾಗಿಲ್ಲ

ಆದರೆ "ತಂದೆ" ಎನ್ನುವದಕ್ಕಿಂತಲೂ ಹೆಚ್ಚಾಗಿ ಸುಪರಿಚಿತವಾದದ್ದಾಗಿದೆ.

ದೇವರು ತಂದೆ ಎನ್ನುವ ಭಾವನೆ ಹಳೆ ಒಡಂಬಡಿಕೆಯಲ್ಲಿ ಕಂಡುಕೊಳ್ಳುತ್ತೇವೆ, ಆದಾಗ್ಯೂ ಇದು ಒಂದು ಪ್ರಧಾನ ವಿಷಯವಲ್ಲ (ವಿಮೋಚನಕಾಂಡ 4:22; ಧರ್ಮೋಪ ದೇಶಕಾಂಡ 8:5; 14:1; 32:6; ಕೀರ್ತನೆ 2:7; 103:13; ಯೆಶಾಯ 63:16; 64:8; ಯೆರೆಮೀಯ 3:4, 19; ಹೋಶೆಯ 11:1-4; ಮಲಾಕಿ 2:10). ಆಸಕ್ತಿಯುಳ್ಳದ್ದಾಗಿ, ಹಳೆ ಮತ್ತು ಹೊಸ ಒಡಂಬಡಿಕೆಯ ಮಧ್ಯಂತರ ಅವಧಿಯಲ್ಲಿ ಯೆಹೂದ್ಯರ ಸಾಹಿತ್ಯದಲ್ಲಿ ದೇವರನ್ನು ತಂದೆಯಂತೆ ಪ್ರಾರ್ಥನೆಯಲ್ಲಿ ಸಂಬೋಧಿಸುವ ಕೆಲವು ಉದಾಹರಣೆಗಳನ್ನು ಕಾಣುತ್ತೇವೆ.[24] ಹಾಗಿದ್ದರೂ, ಯೇಸು ತನ್ನ ಸೇವಾ ಅವಧಿಯಲ್ಲಿ ದೇವರು ತಂದೆಯೆಂಬ ಭಾವನೆಯನ್ನು ಪ್ರಸಿದ್ಧಿಗೆ ತಂದನು.

ದೇವರ **ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ** ಎಂದು ಯೇಸು ಹೇಳಿದನು. "ಆತನ ನಾಮವೂ ಪರಿಶುದ್ಧವೂ ಭಯಂಕರವೂ ಆಗಿದೆ" ಎಂದು ಕೀರ್ತನೆಗಾರನು ಬರೆಯುತ್ತಾನೆ (ಕೀರ್ತನೆ 111:9). "ಆತನ ಹೆಸರು ಪರಿಶುದ್ಧವೂ ಪೂಜ್ಯನಿಯವೂ" ಎಂದು KJV ಯಲ್ಲಿ ಅನುವಾದಿಸಲಾಗಿದೆ. "ಪೂಜ್ಯನಿಯವೂ" (reverend) ಎನ್ನುವದು ದೇವರ ಹೆಸರಲ್ಲ, ಇಲ್ಲವೆ ಇದು ದೇವರಿಗೆ ಒಂದು ಶಿರೋನಾಮೆ ಅಲ್ಲ; ಇದು ಆತನ ಹೆಸರನ್ನು ರೂಪಾಂತರಿಸುವದಾಗಿದೆ. ಆತನ ಹೆಸರು ಭಯಭಕ್ತಿಯಿಂದ, ಸನ್ಮಾನ, ಮತ್ತು ಮರ್ಯಾದೆಯಿಂದ ಗೌರವಿಸುವಂಥದ್ದಾಗಿದೆ (ನೋಡಿರಿ ವಿಮೋಚನಕಾಂಡ 20:7).

"Hallowed" ಎನ್ನುವ ಪದವು ಬಳಕೆಯಲಿಲ್ಲದ ಪುರಾತನ hagiazō ದಿಂದ ಅನುವಾ ದವಾಗಿದೆ, ಇದರ ಅರ್ಥ "ಪರಿಶುದ್ಧಮಾಡು." ನಿಜವಾಗಿಯು ದೇವರ ಹೆಸರನ್ನು ಪರಿಶುದ್ಧಗೊಳಿಸುವಾಗ ಗೌರವಿಸುವದು, ಮಹಿಮೆಪಡಿಸುವದು, ಮತ್ತು ಆತನಿಗೆ ವಿಧೆಯರಾಗುವದನ್ನು ಒಳಗೊಂಡಿರುತ್ತದೆ (5:16; 7:21; 1 ಕೊರಿಂಥ 10:31). ಪರಿಶುದ್ಧ ಗೊಳಿಸು ಎನ್ನುವ ಪದಕ್ಕೆ ಸಂಬಂಧಪಟ್ಟಿರುವ ಶಬ್ದಗಳು "ಸಂತ," "ಶುದ್ಧಿಗೊಳಿಸು," ಮತ್ತು "ಪವಿತ್ರಗೊಳಿಸುವಿಕೆ." ದೇವರು ಪರಿಶುದ್ಧನು, ಮತ್ತು ಆತನು ಪರಿಶುದ್ಧನಾಗಿರುವಂತೆ ಆತನ ಮಕ್ಕಳು ಪರಿಶುದ್ಧವಾಗಿರಬೇಕು (1 ಪೇತ್ರ 1:15, 16).

**ವಚನ 10.** ದೇವರನ್ನು ಹೆಸರಿಸಿ ಮತ್ತು ಆರಾಧಿಸಿದ ನಂತರ, ಯೇಸು ತನ್ನ ರಾಜ್ಯದ ವಿಷಯಕ್ಕೆ ತಿರುಗಿಕೊಂಡು **ನಿನ್ನ ರಾಜ್ಯವು ಬರಲಿ** ಎಂದು ಹೇಳಿದನು. ಯೇಸು ತನ್ನ ಶಿಷ್ಯರಿಗೆ ಈ ಪ್ರಾರ್ಥನೆಯನ್ನು ಕಲಿಸುವ ಸಮಯದಲ್ಲಿ ದೇವರ ರಾಜ್ಯವು ಇನ್ನು ಮುಂದಿನ ದಿನಗಳಲ್ಲಿ ಬರುವಂಥದ್ದಾಗಿತ್ತು (3:2; 4:17; 10:7; ಮಾರ್ಕ 9:1; ಅಪೊಸ್ತಲರ ಕೃತ್ಯಗಳು 1:6-8). ಅಪೊಸ್ತಲರ ಕತ್ಯಗಳು 2ನೇ ಅದ್ಯಾಯದಲ್ಲಿ ದಾಖಲಿಸಿದಂತೆ ಪಂಚಾಶತ್ತಮ ದಿನದಂದು, ಏನಾಗುತ್ತದೆ ಎಂದು ನೋಡಲು ಈ ಪ್ರಾರ್ಥನೆ ಪೂರ್ವ ನಿರೀಕ್ಷೆಯಾಗಿತ್ತು. ಆ ದಿನದಂದು ಪೇತ್ರನು ಮೊದಲನೆ ಸಾರಿ ಅದರ ಪರಿಪೂರ್ಣತೆಯಲ್ಲಿ ಸುವಾರ್ತೆ ಸಾರಿದನು. ದೇವರು ಯೇಸುವನ್ನು ದಾವೀದ ಸಿಂಹಾಸನದಲ್ಲಿ ಕುಳಿತುಕೊಳ್ಳಲು ಎಬ್ಬಿಸಿದ್ದಾನೆ, ಮತ್ತು ಆ ಕ್ಷಣದಲ್ಲಿ ಆತನು ಪರಲೋಕದಲ್ಲಿದ್ದು ದೇವರ ರಾಜ್ಯವನ್ನು ಆಳುತ್ತಿದ್ದನು ಎಂದು ಆತನು ಹೇಳಿದ್ದಾನೆ (ಅಪೊಸ್ತಲರ ಕೃತ್ಯಗಳು 2:24-36). ಯೇಸುವನ್ನು "ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆ" (ಅಪೊಸ್ತಲರ ಕೃತ್ಯಗಳು 2:36), "ಕ್ರಿಸ್ತನು" ಮೆಸ್ಸೀಯನು ಅಥವಾ "ದೇವರ ಅಭಿಷೇಕ ಹೊಂದಿದವನು" ಆಗಿರುವನು. ರಾಜ್ಯವು ಬಂದಿದೆ (ಕೊಲೊಸ್ಸೆ 1:13; ಇಬ್ರಿಯ 12:28; ಪ್ರಕಟಣೆ 1:9). ಕ್ರಿಸ್ತನು ಈಗ ಅದನ್ನು ಆಳುತ್ತಿದ್ದಾನೆ, ಮತ್ತು ತಂದೆಯಾದ ದೇವರಿಗೆ ಈ ರಾಜ್ಯವನ್ನು ಒಪ್ಪಿಸಿಕೊಡುವವರಿಗೆ ಆತನು ಆಳುತ್ತಾನೆ (1 ಕೊರಿಂಥ 15:24-26).

**ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ** ಎಂದು ರಾಜ್ಯಕ್ಕೆ ಬಹಳ ಹತ್ತಿರ ಸಂಬಂಧವಿರುವದನ್ನು ಯೇಸು ಕಲಿಸಿದನು. ಪರಲೋಕದಲ್ಲಿ,

ದೇವರ ಚಿತ್ತವನ್ನು ಸಂಪೂರ್ಣವಾಗಿ ಬಲಪಡಿಸುವ ದೇವದೂತರ ಸಮೂಹವು ಇದೆ. ಭೂಮಿಯ ಮೇಲಿರುವ ಯೇಸುವಿನ ಹಿಂಬಾಲಕರು ಅದೇ ರೀತಿಯಲ್ಲಿ ಜನರ ಹೃದಯವನ್ನು ಬೇಧಿಸಿಕೊಂಡು ಹೋಗುವಂತೆ ಪ್ರಾರ್ಥಿಸಬೇಕೆಂದು ಅವರಿಗೆ ಸೂಚನೆ ಕೊಡಲ್ಪಟ್ಟಿತ್ತು. ದೇವರ ಚಿತ್ತಕ್ಕೆ ಶಿಷ್ಯರು ಸಂಪೂರ್ಣವಾಗಿ ತಮ್ಮ ಜೀವಿತಗಳನ್ನು ಒಪ್ಪಿಸಿಕೊಡುವದು ಇಂಥಹ ಪ್ರಾರ್ಥನೆ ಇದನ್ನು ಕೋರುತ್ತದೆ. ಇಂಥಹ ದೀನ ನಡತೆಗೆ ದೊಡ್ಡ ತ್ಯಾಗವು ಬೇಕಾಗುತ್ತದೆ. ಗೆತ್ಸೆಮನೆ ತೋಟದಲ್ಲಿ ಇದೇ ರೀತಿಯ ಮಾತುಗಳನ್ನು ಹೇಳಿದ ಮೇಲೆ ಯೇಸುವಿನಿಂದ ಅಂತಿಮ ಬೆಲೆ ಕೊಡಬೇಕಾಯಿತು: "ನನ್ನ ಚಿತ್ತವಲ್ಲ, ನಿನ್ನ ಚಿತ್ತವೇ ಆಗಲಿ" ಎಂದು ಹೇಳಿದನು (ಲೂಕ 22:42).

**ವಚನ 11.** ಯೇಸು ತಕ್ಷಣವೇ ಆತ್ಮೀಕ ವಿಷಯದಿಂದ ಶಾರೀರಿಕ ವಿಷಯಕ್ಕೆ ಬದಲಾದನು. **ನಮ್ಮ ಅನುದಿನದ ಆಹಾರವನ್ನು ಈ ಹೊತ್ತು ದಯಪಾಲಿಸು** ಎಂದು ಆತನು ಹೇಳಿದನು. "ದಿನಾಲು" ಎಂದು ಅನುವಾದಿಸಿರುವ ಗ್ರೀಕ್ ಪದವು (*epiousios*) ವಾಕ್ಯದಲ್ಲಿ (ಲೂಕ 11:3 ಅದಕ್ಕೆ ಸರಿಸಮಾನವಾಗಿರುವದನ್ನು ಹೊರತುಪಡಿಸಿ) ಬೇರೆ ಎಲ್ಲಿಯೂ ಕಾಣಿಸುವದಿಲ್ಲ. ಆ ಪದವು "ಸಾಕಾಗುವಷ್ಟು," "ದಿನಾಲು," ಅಥವಾ "ನಾಳೆಗಾಗಿ" ಎಂದರ್ಥ ಕೊಡುತ್ತದೆ. ನಿರ್ದಿಷ್ಟವಾಗಿ ಸರಿಹೊಂದುವ ಅನುವಾದ ಹೊರತುಪಡಿಸಿ ದೇವರಿಗೆ ಪ್ರಾರ್ಥನೆ ಒಬ್ಬನ ಮೂಲ ಅವಶ್ಯಕತೆಯನ್ನು ಒದಗಿಸುವದು ಆಗಿದೆ. "ಈ ದಿನ" ಎಂದು ಹೇಳುವ ಬದಲಾಗಿ ಲೂಕ 11:3ರಲ್ಲಿ "ಪ್ರತಿದಿನ" ಎಂದು ಹೇಳಲಾಗಿದೆ.

ಅಭಿವೃದ್ಧಿ ಹೊಂದಿರುತ್ತಿರುವ ಹೆಚ್ಚಿನ ದೇಶಗಳಲ್ಲಿ ಜನರು ಇನ್ನು ಸಹ ಅವರು ಸರಿಯಾದ ಕೂಲಿಗಾಗಿ ಆ ದಿನದ ಊಟಕ್ಕಾಗಿ ಪ್ರತಿದಿನ ಎಲ್ಲಾ ದಿವಸಗಳಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ. ಹೆಚ್ಚಾಗಿ ಹಲವು ಬಾರಿ ಸಮೃದ್ಧಿಯು ಕೃತಜ್ಞತೆಯಿಲ್ಲದಿರುವಿಕೆ ಮತ್ತು ದಿನಾಲು ದೇವರ ಮೇಲೆ ಆತುಕೊಳ್ಳದಿರುವದಕ್ಕೆ ನಡೆಸುವದನ್ನು ನೋಡುತ್ತೇವೆ (ಧರ್ಮೋಪ ದೇಶಕಾಂಡ 6:10-12; 8:11-18). ಯಾವಾಗ ದೇವರು ಇಸ್ರಾಯೇಲ್ಯರಿಗೆ ಪರಲೋಕದಿಂದ ಮನ್ನವನ್ನು ಹೊದಗಿಸಿದನೋ, ಆತನು ಸಬ್ಬತ್ ದಿನಕ್ಕಾಗಿ ಸಿದ್ಧತೆಗಳನ್ನು ಹೊರತುಪಡಿಸಿ, ಪ್ರತಿದಿನ ಒಬ್ಬ ವ್ಯಕ್ತಿಗೆ ಸಾಕಾಗುವಷ್ಟು ಆಹಾರವನ್ನು ಕೊಟ್ಟನು (ವಿಮೋಚನಕಾಂಡ 16:12-31). ಒಂದು ದಿನಕ್ಕೆ ಬೇಕಾಗಿರುವ ಹೆಚ್ಚಿನ ಆಹಾರವನ್ನು ಕೂಡಿಸಿಟ್ಟುಕೊಂಡಿದ್ದಿಯಾದರೆ, ಮನ್ನ ಕೆಟ್ಟು ಹೋಗುತ್ತಿತ್ತು ಮತ್ತು ಬೆಳಗಿನ ಜಾವದಲ್ಲಿ ನೋಡುವಾಗ ಅದರಲ್ಲಿ ಹುಳುಗಳು ತುಂಬಿಕೊಂಡಿದ್ದವು. ಆ ನಾಳೆಯ ದಿನಕ್ಕಾಗಿ ಚಿಂತಿಸುವ ಮೂರ್ಖತನವನ್ನು ಯಾಕೋಬನು ನಮಗೆ ಕಲಿಸಿದ್ದಾನೆ, ಆ ನಾಳೆಯು ಎಂದಿಗೂ ಬರುವದಿಲ್ಲ (ಯಾಕೋಬ 4:13-15; ನೋಡಿರಿ ಮತ್ತಾಯ 6:34).

**ವಚನ 12.** ಯೇಸುವಿನ ಪ್ರಕಾರ, ಪ್ರಾರ್ಥನೆಗೆ ಸಂಬಂಧಿಸಿದ ಇನ್ನೊಂದು ವಿಷಯವು ಕ್ಷಮಾಪಣೆಯಾಗಿದೆ. Debts (*opheilēma*) ಎಂಬ ಗ್ರೀಕ್ ಶಬ್ದವು "ತಪ್ಪು" ಎಂದು ಅರ್ಥಕೊಡುವ ಐದು ಗ್ರೀಕ್ ಶಬ್ದಗಳಲ್ಲಿ ಒಂದಾಗಿದೆ (ಲೂಕ 11:4 ನೋಡಿರಿ), ಮತ್ತು ಇದು ಹೊಸ ಒಡಂಬಡಿಕೆಯಲ್ಲಿ ಕೆಲವು ಸಾರಿ ಮಾತ್ರ ಉಪಯೋಗಿಸಿದೆ. ಹಾಗಿದ್ದರೂ, ಇದರ ಕ್ರಿಯಾಪದದ ರಚನೆಯನ್ನು ಮೂವತ್ತು ಸಾರಿಗಿಂತಲು ಹೆಚ್ಚಾಗಿ ಉಪಯೋಗಿಸಲ್ಪಟ್ಟಿದೆ. ಅರೇಮಿಕ್ ಭಾಷೆಯಲ್ಲಿ, ಇದು ಯೇಸುವಿನ ದಿನಗಳಲ್ಲಿ ಪಾಲೇಸ್ತೀನದ ಸಾಮಾನ್ಯ ಭಾಷೆಯಾಗಿತ್ತು, ಅದನ್ನು ಸಂಪ್ರದಾಯಕವಾಗಿ ಪಾಪವನ್ನು "ಸಾಲಕ್ಕೆ" (*hobá*) ಹೋಲಿ ಸುತ್ತಿದ್ದರು.[25] ನಾವೆಲ್ಲರು **ಸಾಲಗಾರರಾಗಿರುವದರಿಂದ** ದೇವರ ಕೃಪೆಯ ಸಿಂಹಾಸನದ ಹತ್ತಿರ ಬರಲು ಈ ಪದ ಉಪಯೋಗಿಸುವದು ಸರಿಯಾದ ಪದವಾಗಿದೆ, ಕ್ಷಮಿಸಲಾರದ ಒಬ್ಬ ಆಳಿನ ಸಾಮ್ಯವನ್ನು ಯೇಸು ಹೇಳಿ ಈ ಸತ್ಯವನ್ನು ನೆನಪು ಮಾಡಿದನು (18:23-35). ಕ್ಷಮಿಸಲಾರದವನು ದೇವರಿಂದಲೂ ಕ್ಷಮಿಸಲ್ಪಡುವದಿಲ್ಲ ಎಂಬುದು ಈ ಸಾಮ್ಯದಿಂದ ಇನ್ನೊಂದು ಪಾಠವಾಗಿದೆ. ಯೇಸು ಅದನ್ನು ತನ್ನ ಮಾದರಿಯ ಪ್ರಾರ್ಥನೆಯಲ್ಲಿ

ಸ್ಪಷ್ಟಪಡಿಸಿದ್ದಾನೆ ಮತ್ತು ತರುವಾಯ 6:14, 15ರಲ್ಲಿ ವಿಷಯವನ್ನು ವಿವರಿಸಿದ್ದಾನೆ. ನಮಗೆ ತಪ್ಪು ಮಾಡಿದವರು ಕ್ಷಮಾಪಣೆ ಹೊಂದಲು ಅರ್ಹರಾಗಿದ್ದರೂ ಇಲ್ಲದಿದ್ದರೂ ಅಂತಹವರನ್ನು ನಾವು ಕ್ಷಮಿಸುವ ಮನೋಭಾವನೆಯ ಮೇಲೆ ದೇವರು ನಮನ್ನು ಕ್ಷಮಿಸುವದು ಆಧಾರಗೊಂಡಿದೆ. ಯೇಸು ಇತರರನ್ನು ಕ್ಷಮಿಸಿದಂತೆಯೇ ನಾವು ಕ್ಷಮಿಸಬೇಕು - ಶಿಲುಬೆಗೆ ಹಾಕಿದವರನ್ನು ಸಹ ಆತನು ಕ್ಷಮಿಸಿದನು (ಲೂಕ 23:34).

**ವಚನ 13. ನಮ್ಮನ್ನು ಶೋಧನೆಯೊಳಗೆ ಸೇರಿಸದೆ ಕೇಡಿನಿಂದ ನಮ್ಮನ್ನು ತಪ್ಪಿಸು** ಎಂದು ಹೇಳುವದರ ಮುಖಾಂತರ ಯೇಸು ತನ್ನ ಭಿನ್ನಹಗಳನ್ನು ಮುಕ್ತಾಯ ಮಾಡುತ್ತಾನೆ. ಶೋಧನೆ (*peirasmos*) ಎಂಬ ಗ್ರೀಕ್ ಶಬ್ದವು ದೇವರಿಂದ “ಪರೀಕ್ಷೆ” ಅಥವಾ ಸೈತಾನನಿಂದ “ಶೋಧನೆ” ಎಂಬುದನ್ನು ಸೂಚಿಸಬಹುದು (ನೋಡಿರಿ 4:1 ರ ಮೇಲಿನ ವ್ಯಾಖ್ಯಾನ). ನಾವು ಶೋಧನೆ ಹೊಂದುವಂತೆ ದೇವರು ಅನುಮತಿಸುತ್ತಾನೆ, ಆದರೆ “ಆತನೇ ಸ್ವಂತವಾಗಿ ಯಾರನ್ನೂ ಶೋಧಿಸುವದಿಲ್ಲ” (ಯಾಕೋಬ 1:13). ಯಾವಾಗ ದೇವರು ನಮಗೆ ಶೋಧನೆಗೆ ಒಳಗಾಗಲು ಅನುಮತಿಸುವಾಗ, ಆತನು ನಮಗೆ ಸೈತಾನನು ಏನು ಮಾಡಲು ಸಾಮರ್ಥ್ಯ ಹೊಂದಿದ್ದಾನೋ ಅದರ ಮೇಲೆ ಮಿತಿಯನ್ನು ಹಾಕುತ್ತಾನೆ (ಯೋಬ 1; 2), ಮತ್ತು ಆತನು “ತಪ್ಪಿಸಿಕೊಳ್ಳುವ ಮಾರ್ಗವನ್ನು” ಒದಗಿಸುವನು (1 ಕೊರಿಂಥ 10:13).

“ನಮ್ಮನ್ನು ಶೋಧನೆಯೊಳಗೆ ಸೇರಿಸಬೇಡ” ಎಂಬ ವಾಕ್ಯಭಾಗದ ನಿರ್ದಿಷ್ಟವಾದ ಅರ್ಥದ ಬಗ್ಗೆ ಕೆಲವು ಸಾರಿ ಚರ್ಚೆಯಾಗಿದೆ. “ದೇವರು ಯಾರನ್ನಾದರು ಶೋಧನೆಗೆ ನಡೆಸಿದ್ದಾನೋ?” ಎಂದು ನಾವು ಕೇಳುತ್ತೇವೆ. ಹಾಗಿದ್ದರೂ, ಯೇಸು “ಸೈತಾನನಿಂದ ಶೋಧಿಸಲ್ಪಡುವದಕ್ಕಾಗಿ ಆತ್ಮನು ಆತನನ್ನು ಅಡವಿಗೆ ಒಯ್ದನು” ಎಂಬುದು ಗಮನಿಸುವಂಥದ್ದಾಗಿದೆ (4:1). ಆತ್ಮೀಕ ಕ್ಷೇತ್ರದಲ್ಲಿ ಹೆಚ್ಚಾಗಿ ನಡೆಯುವದೆಲ್ಲವು ನಮಗೆ ರಹಸ್ಯಾರ್ಥವಾಗಿ ಇರುತ್ತದೆ (ಎಫೆಸ 6:12), “ದೇವರು ಭಕ್ತರನ್ನು ಕಷ್ಟಗಳೊಗಿಂದ ತಪ್ಪಿಸುವದಕ್ಕೆ ತಿಳಿದವನಾಗಿದ್ದಾನೆ” ಎಂದು ನಾವು ನಿಶ್ಚಯವಾಗಿರಬಹುದು (2 ಪೇತ್ರ 2:9). ಆದದರಿಂದ, “ಶೋಧನೆಗೆ ಒಳಗಾಗದಂತೆ” (26:41) ಮತ್ತು ದೇವರು “ದುಷ್ಟನಿಂದ” ವಿಮೋಚಿಸುವದಕ್ಕಾಗಿ ಅಥವಾ “ದುಷ್ಟನೊಬ್ಬನಿಂದ” ಬಿಡಿಸುವದಕ್ಕಾಗಿ ಯೇಸುವಿನ ಶಿಷ್ಯರು ಪ್ರಾರ್ಥಿಸಬೇಕು (NIV).

ತರುವಾಯ ಕಾಲದಲ್ಲಿನ ಗ್ರೀಕ್ ಭಾಷೆಯ ಕೈ ಬರಹಗಳಲ್ಲಿ ಈ ದೇವರ ಸ್ತೋತ್ರವನ್ನು ಸೇರಿಸಲಾಗಿದೆ, ಇದನ್ನು NASBಯು ಆವರಣ ಚಿಹ್ನೆಯಲ್ಲಿ ಬರೆದಿದೆ: “**[ನಿನ್ನ ರಾಜ್ಯವು ಮತ್ತು ಬಲವು ಮತ್ತು ಮಹಿಮೆಯೂ ಸದಾಕಾಲವಿರಲಿ. ಆಮೇನ್.]**” ಎರಡನೆಯ ಶತಮಾನದಲ್ಲಿದ್ದ ಕ್ರೈಸ್ತ ಬರಹವಾದ *Didache*ದಲ್ಲಿ, ಸಂಕ್ಷಿಪ್ತ ಮುಕ್ತಾಯವಿದೆ: “ನಿನ್ನ ಬಲವು ಮತ್ತು ಮಹಿಮೆ ಯಾವಾಗಲು ಇರಲಿ.”[26] ಈ ದೇವರ ಸ್ತೋತ್ರದ ವಿಷಯದ (“ರಾಜ್ಯ,” “ಬಲ,” ಮತ್ತು “ಮಹಿಮೆ”) ಕನ್ನಡಿಯನ್ನು ಪ್ರಾರ್ಥನೆಯ ಪ್ರಾರಂಭದಲ್ಲಿಯೇ ಕಂಡುಕೊಳ್ಳುತ್ತಾರೆ (6:9, 10).

## ಷರತ್ತಿನಿಂದಕೂಡಿದ ಕ್ಷಮಾಪಣೆ (6:14, 15)

**14ನೀವು ಜನರ ತಪ್ಪುಗಳನ್ನು ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ನಿಮ್ಮ ತಪ್ಪುಗಳನ್ನೂ ಕ್ಷಮಿಸುವನು. 15ಆದರೆ ನೀವು ಜನರ ತಪ್ಪುಗಳನ್ನು ಕ್ಷಮಿಸದೆಹೋದರೆ ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸುವದಿಲ್ಲ.**

**ವಚನಗಳು 14, 15.** “ಕ್ಷಮಿಸು” ಎಂದು ಹೇಳುವ ಗ್ರೀಕ್ ಪದವು (*aphiēmi*) “ತೆಗೆದು ಹಾಕು,” “ಅಳಿಸಿಬಿಡು,” ಅಥವಾ “ಮನ್ನಿಸು” ಎಂದು ಅರ್ಥಕೊಡುತ್ತದೆ. ನಾವು ಪಾಪ ಮಾಡಿ ಕ್ಷಮಾಪಣೆಗಾಗಿ ದೇವರನ್ನು ಕೇಳಿದಾಗ, ಆತನು ನಮ್ಮ ಪಾಪವನ್ನು ನಮ್ಮಿಂದ ತೆಗೆಯುತ್ತಾನೆ ಮತ್ತು ದೂರ ಬಿಸಾಡುತ್ತಾನೆ. ಆತನು ಪಾಪವನ್ನು ಮರೆಯದೆಯಿರುವಾಗ,

ನಮ್ಮ ವಿರುದ್ಧವಾಗಿ ಆ ಪಾಪವನ್ನು ಬಹಳ ದಿನಗಳವರೆಗೆ ಹಿಡಿದು ಕೊಂಡಿರುವದಿಲ್ಲ, ಮತ್ತು ಅದು ನಮ್ಮಲ್ಲಿ ನಡೆಯದಿರದಂತೆ ನಮ್ಮೊಂದಿಗೆ ಆತನು ಪ್ರತಿಕ್ರಿಯಿಸುತ್ತಾನೆ.[27]

*Paraptōma* ಎಂಬ ಬಹುವಚನದಿಂದ ಅಪರಾಧಗಳು (**ತಪ್ಪುಗಳನ್ನು**) ಎಂದು ಅನುವಾದಿಸಲಾಗಿದೆ, ಇದನ್ನು "ಅತಿಕ್ರಮ" ಎಂದು ಸಹ ಭಾಷಾಂತರ ಮಾಡಬಹುದು. ಈ ಶಬ್ದವನ್ನು ಇಲ್ಲಿ ಮತ್ತು ಮಾರ್ಕ 11:25, 26ರಲ್ಲಿ ಮಾತ್ರ ಉಪಯೋಗಿಸಲಾಗಿದೆ. ಈ ಪದವು "ತಪ್ಪಾದ ಹೆಜ್ಜೆ," "ಮುಗ್ಗರಿಸು," ಅಥವಾ "ಜಾರುವದು" ಎಂಬ ಆಲೋಚನೆಯು ಹೊಂದಿರುತ್ತದೆ. ವಚನ 12ದಲ್ಲಿ "ತಪ್ಪುಗಾಗಿ" ("ಸಾಲ") (debt, *opheilēma*) ಶಬ್ದದಂತೆ, ಇದು "ಪಾಪ"ದ ಪದಕ್ಕೆ ಮತ್ತೊಂದಾಗಿದೆ.

ದೇವರು ನಮಗೆ ಕ್ಷಮಿಸುವದು ನಮಗೆ ತಪ್ಪು ಮಾಡಿದವರನ್ನು ನಾವು **ಕ್ಷಮಿಸುವ** ಮನೋಭಾವನೆ ಮೇಲೆ ಆತುಕೊಂಡಿದೆ. ಆ ಕ್ಷಮಾಪಣೆ ನಾವು ಹಾಗೆ ಹಿಡಿದಿಟ್ಟುಕೊಂಡರೆ, ದೇವರು ಸಹ ನಮ್ಮ **ತಪ್ಪುಗಳನ್ನು ಕ್ಷಮಿಸುವದಿಲ್ಲ.**

## ಉಪವಾಸ (6:16-18)

**16ಇದಲ್ಲದೆ ನೀವು ಉಪವಾಸಮಾಡುವಾಗ ಕಪಟಿಗಳಂತೆ ಮುಖವನ್ನು ಸಪ್ಪಗೆ ಮಾಡಿಕೊಳ್ಳಬೇಡಿರಿ. ಅವರು ತಾವು ಉಪವಾಸಿಗಳೆಂದು ಜನರಿಗೆ ತೋರುವದಕ್ಕಾಗಿ ತಮ್ಮ ಮುಖವನ್ನು ವಿಕಾರಮಾಡಿಕೊಳ್ಳುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. 17ಆದರೆ ನೀನು ಉಪವಾಸ ಮಾಡುವಾಗ ತಲೆಗೆ ಎಣ್ಣೆ ಹಚ್ಚಿಕೊಂಡು ಮುಖವನ್ನು ತೊಳಕೋ. 18ಹೀಗೆ ಮಾಡಿದರೆ ನೀನು ಉಪವಾಸಿಯೆಂದು ಜನರಿಗೆ ಕಾಣದೆಹೋದಾಗ್ಯೂ ಅಂತರಂಗದಲ್ಲಿರುವ ನಿನ್ನ ತಂದೆಗೆ ಉಪವಾಸಿಯೆಂದು ಕಾಣಿಸಿಕೊಳ್ಳುವಿ. ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು.**

ಯೇಸು ಕೊಡುವದು (6:2-4) ಮತ್ತು ಪ್ರಾರ್ಥಿಸುವ (6:5-15), ವಿಷಯಗಳನ್ನು ಚರ್ಚಿಸಿದ ತರುವಾಯ, ಆತನ ಶಿಷ್ಯರು ಒಳಗೊಂಡಿರಬೇಕಾಗಿರುವ ಮೂರು ಪ್ರಧಾನ ಆತ್ಮೀಕ ತಿದ್ದುಪಾಟುಗಳಲ್ಲಿ ಮೂರನೆಯ ಅಂಶ ಉಪವಾಸಸದ ವಿಷಯ ತೆಗೆದುಕೊಂಡನು (6:16-18). ಮತ್ತೊಂದಾವರ್ತಿ, ಜನರಿಗೆ ಕಾಣಿಸುವಂತೆ ಮಾಡುವ ನೀತಿಯ ಕಾರ್ಯಗಳ ಕುರಿತು ಅವರು ಎಚ್ಚರಿಸಲ್ಪಟ್ಟರು.

**ವಚನ 16. ನೀವು ಉಪವಾಸಮಾಡುವಾಗ** ಎಂಬ ವಾಕ್ಯಭಾಗದೊಂದಿಗೆ ಯೇಸು ಉಪವಾಸದ ಕುರಿತು ಚರ್ಚೆ ಪ್ರಾರಂಭಿಸಿದನು. ದಾನಧರ್ಮ ಮಾಡುವ (6:2) ಮತ್ತು ಪ್ರಾರ್ಥನೆಯೆಂಬ ಅರ್ಪಣೆ (6:5), ಉಪವಾಸ ಮಾಡುವ ಯೆಹೂದ್ಯರ ಆಚರಣೆಗಳನ್ನು ಆತನ ಶಿಷ್ಯರು ಈಗಾಗಲೇ ಮಾಡುತ್ತಿದ್ದಾರೆ ಎಂದು ಯೇಸು ಅಭಿಪ್ರಾಯ ಹೊಂದಿದ್ದನು.

ಉಪವಾಸ ಎಂಬ ಶಬ್ದಕ್ಕೆ ಹಳೆ ಒಡಂಬಡಿಕೆಯ ಇಬ್ರಿಯಾ ಶಬ್ದವು *tsum* ಎಂಬುದಾಗಿದೆ. ಉಪವಾಸವೆಂಬ *ಭಾವನೆಯನ್ನು* ಪ್ರಾಯಶ್ಚಿತ್ತದ ದಿನಕ್ಕೆ ಸಂಬಂಧಿಸಿ ಆತ್ಮದ ದೀನತೆಯನ್ನು ವಿವರಿಸಲಾಗಿದೆ ("ವ್ಯಥೆಯನ್ನುಂಟು ಮಾಡು"; KJV) (ಯಾಜಕಕಾಂಡ 16:29-31). ನಿಜವಾಗಿಯೂ ಧರ್ಮಶಾಸ್ತ್ರದಲ್ಲಿ ಇದೊಂದು ಮಾತ್ರವೇ ಆಜ್ಞಾಪಿಸಿದ ಉಪವಾಸವಾಗಿದೆ, ಆದರೆ ಅನೇಕ ಶತಮಾನಗಳಲ್ಲಿ ಇತರ ಉಪವಾಸ ದಿನಗಳು ಸೇರಿ ಸಲ್ಪಟ್ಟಿದ್ದವು. "ಪಶ್ಚಾತ್ತಾಪದದ ದಿನದಂದು (1) ಉಣ್ಣುವದು, (2) ಕುಡಿಯುವದು, (3) ತೊಳೆದುಕೊಳ್ಳುವದು, (4) ಯಾವುದೇ ಬೇರೆ ಬೇರೆ ಹಚ್ಚುವದು, (5) ಚಪ್ಪಲಿ ಹಾಕುವದು, (6) ಅಥವಾ ಲೈಂಗಿಕ ಕಾರ್ಯಗಳಿಗೆ ಸಂಬಂಧಿಸಿರುವದು ನಿಷೇಧಿಸಲಾಗಿದೆ"[28] ಎಂದು ಯೆಹೂದ್ಯರ ಸಂಪ್ರದಾಯ ಹೇಳುತ್ತದೆ.

ಹಳೆ ಒಡಂಬಡಿಕೆಯಲ್ಲಿ ಕೆಲವು ಉಪವಾಸಗಳು ಸಾಂದರ್ಭಿಕ ಅನುಸಾರ ಮತ್ತು ಅಸಾಧಾರಣವಾಗಿರುತ್ತವೆ, ಇತರವುಗಳನ್ನು ನಿರಂತರವಾಗಿ ಮಾಡುತ್ತಿದ್ದರು. ಉಪವಾಸವು ಅನಾರೋಗ್ಯದಲ್ಲಿರುವಾಗ, ಗೋಳಾಡುವಾಗ, ದುರ್ಘಟನೆ ಆಗುವಾಗ ಪಾಪಕ್ಕಾಗಿ ದುಃಖಿಸುವಾಗ, ಮತ್ತು ಇನ್ನು ಇತರೆ ಸಂಕಷ್ಟದ ಸಂದರ್ಭಗಳಲ್ಲಿ ಮಾಡುತ್ತಿದ್ದರು (ನೋಡಿರಿ ಕೀರ್ತನೆ 35:13). ದಾವೀದನು ತನ್ನ ಮಗನು ಅನಾರೋಗ್ಯದಲ್ಲಿದ್ದು ಸಾಯುತ್ತಿರುವಾಗ ಉಪವಾಸ ಮಾಡಿದನು (2 ಸಮುವೇಲ 12:16-23). ಆತನು, ಯಾಬೇಷಿನ ಜನರೊಂದಿಗೆ ಸೌಲನಿಗಾಗಿ ಮತ್ತು ಆತನ ಮಕ್ಕಳಿಗಾಗಿ ಏಳು ದಿನಗಳು ಉಪವಾಸವಿದ್ದು ಗೋಳಾಡಿದನು (1 ಸಮುವೇಲ 31:12, 13; 2 ಸಮುವೇಲ 1:11-16). ಮೋಶೆ ಮತ್ತು ದಾನಿಯೇಲಲಿಬ್ಬರು ದೇವರಿಂದ ಪ್ರಕಟಣೆ ಹೊಂದುವ ಮೊದಲು ಉಪವಾಸ ಮಾಡಿದರು (ವಿಮೋಚನಕಾಂಡ 34:28; ದಾನಿಯೇಲ 9:3). ಎಲೀಯನು ಈಜೆಬೆಲಳ ಕೋಪಕ್ಕೆ ಹೆದರಿಕೊಂಡು ಓಡಿಹೋಗುವಾಗ ಅವನು ಉಪವಾಸ ಮಾಡಿದನು (1 ಅರಸುಗಳು 19:8) ದುಷ್ಟ ಅಹಾಬನು ಸಹ ದೇವರು ಅವನ ಪಾಪಗಳ ನಿಮಿತ್ತ ಅವನ ಮೇಲೆ ಶಾಪ ಬರುತ್ತದೆ ಎಂದು ತಿಳಿಸಿದಾಗ ಅವನು ಉಪವಾಸ ಮಾಡಿದನು. ಅವನ ಪಶ್ಚಾತ್ತಾಪಕ್ಕೆ ಗೌರವಿಸಿ, ದೇವರು ಶಾಪವನ್ನು ತಡೆಹಿಡಿದನು (1 ಅರಸುಗಳು 21:27). ಹಳೆ ಒಡಂಬಡಿಕೆಯಲ್ಲಿ ಸಾಮೂಹಿಕವಾಗಿ ಮತ್ತು ರಾಷ್ಟ್ರೀಯ ಉಪವಾಸ ಮಾಡಿರುವ ಉದಾಹರಣೆಗಳಿವೆ (ಯೆಹೋಶುವ 7:6; ನ್ಯಾಯಸ್ಥಾಪಕ 20:24-28; 1 ಸಮುವೇಲ 7:6; 2 ಪೂರ್ವಕಾಲವೃತ್ತಾಂತ 20:3; ಎಜ್ರನು 8:21-23; ನೆಹಮೀಯಾ 9:1; ಯೋಹಾನ 3:5). ಯೆಹೂದ್ಯರು ಬಾಬೇಲಗೆ ಸೆರೆಯಾಗಿ ತೆಗೆದುಕೊಂಡು ಹೋದಾಗ ಅವರು ಅಲ್ಲಿ ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪವನ್ನು ತೋರಿಸಲು ಉಪವಾಸದ ಸಮಯ ಗೊತ್ತುಮಾಡಿದರು. ಉಪವಾಸವು ನಾಲ್ಕನೆ, ಐದನೇ, ಎಳನೆಯ ಮತ್ತು ಹತ್ತನೆ ತಿಂಗಳಲ್ಲಿ ಮಾಡುತ್ತಿದ್ದರೆಂದು ಜೆಕರ್ಯನು ಹೇಳಿದನು (ಜೆಕರ್ಯ 7:1-7; 8:19).

"ಉಪವಾಸ" (*nēsteuō*) ಎಂದು ಭಾಷಾಂತರಿಸಿದ ಗ್ರೀಕ್ ಕ್ರಿಯಾ ಶಬ್ದವು ಮತ್ತು ಅದಕ್ಕೆ ಸಂಬಂಧಿಸಿದ ನಾಮಪದಗಳು ಹೊಸ ಒಡಂಬಡಿಕೆಯಲ್ಲಿ ಸುಮಾರು ಮೂವತ್ತು ಸಾರಿ ಕಾಣಿಸುತ್ತವೆ. ಈ ಶಬ್ದಗಳು ಆಹಾರ ಮತ್ತು ಕುಡಿಯುವದು ಬಿಡುವದನ್ನು ಸೂಚಿಸುತ್ತವೆ. ಉಪವಾಸವು ಹೆಚ್ಚಾಗಿ ಆತ್ಮೀಕ ಉದ್ದೇಶದೊಂದಿಗೆ ಸಂಬಂಧಿಸಿದೆ. ಇದನ್ನು ಸರಿಯಾಗಿ ಮಾಡುವಾಗ ವ್ಯಕ್ತಿಯನ್ನು ದೇವರ ಹತ್ತಿರಕ್ಕೆ ತೆಗೆದುಕೊಂಡು ಬರುತ್ತದೆ. ಈ ರೀತಿಯಾಗಿ, ಅದು ಪ್ರಾರ್ಥನೆಯೊಂದಿಗೆ ಜೋಡಣೆಯಾಗಿದೆ (ಲೂಕ 2:37; 5:33; ಅಪೊಸ್ತಲರ ಕೃತ್ಯಗಳು 13:3; 14:23). ಉಪವಾಸವು ಪ್ರದರ್ಶನಕ್ಕಾಗಿ ಅಲ್ಲ; ಇದು ಆಳವಾದ ಪಶ್ಚಾತ್ತಾಪ ಮತ್ತು ಭಕ್ತಿಭಾವನೆಯ ನಡತೆ ಮತ್ತು ಹೃದಯದ ಮನೋಧರ್ಮವನ್ನು ಸಾಕ್ಷಿಕರಿಸುವಂಥದ್ದಾಗಿದೆ.

ಯೇಸು, ಮೋಶೆಯ ಧರ್ಮಶಾಸ್ತ್ರದಂತೆ ಜೀವಿಸಿದನು ಮತ್ತು ಸತ್ತನು, ಆತನು ಸೈತಾನನ್ನು ಎದುರಿಸುವ ಮುಂಚೆ ನಾಲ್ವತ್ತು ದಿನಗಳ ಕಾಲ ಹಗಲು ಮತ್ತು ರಾತ್ರಿ ಉಪವಾಸ ವಿದ್ದನು (4:2). ಆತನು ತನ್ನ ಶಿಷ್ಯರಿಗೆ ಉಪವಾಸ ಮಾಡಲು ಆಜ್ಞೆಮಾಡಲಿಲ್ಲ. ಆದ್ದರಿಂದ ಉಪವಾಸಮಾಡಿದನು, ಆದರೂ, ಆತನ ಹಿಂಬಾಲಕರು ಉಪವಾಸ ಮಾಡಬಹುದು ಎಂದು ಪರೋಕ್ಷವಾಗಿ ಸೂಚಿಸಿದನು.

ಹೊಸ ಒಡಂಬಡಿಕೆಯಲ್ಲಿ ನಿರಂತರವಾಗಿ ಆದಿ ಸಭೆಯು ಉಪವಾಸ ಮಾಡಿತು ಎನ್ನುವದಕ್ಕೆ ನಮಗೆ ಯಾವುದೇ ಉದಾಹರಣೆ ಇಲ್ಲ. ಕ್ರೈಸ್ತರು ಮುಖ್ಯವಾದ ನಿರ್ಧಾರಗಳನ್ನು ಮಾಡುವದಕ್ಕಿಂತ ಮುಂಚೆ ಉಪವಾಸ ಮಾಡುತ್ತಿದ್ದರು, ಅದರಂತೆ ಪೌಲ ಮತ್ತು ಬಾರ್ನಬರನ್ನು ಮೊದಲನೆಯ ಸೇವಾ ಪ್ರಯಾಣಕ್ಕೆ ಕಳುಹಿಸುವಾಗ ಉಪವಾಸ ಮಾಡಿದರು (ಅಪೊಸ್ತಲರ ಕೃತ್ಯಗಳು 13:2), ಮತ್ತು ಸಭೆಯವರ ಸೇವೆ ಮಾಡಲು ಹಿರಿಯರನ್ನು ಆಯ್ಕೆಮಾಡುವ ಮೊದಲು ಉಪವಾಸ ಮಾಡುತ್ತಿದ್ದರು (ಅಪೊಸ್ತಲರ ಕೃತ್ಯಗಳು 14:23).

ಕ್ರಿಸ್ತನು ಬಂದಾಗ, ಫರಿಸಾಯರು ವಾರಕ್ಕೆ ಎರಡು ದಿನ ಉಪವಾಸ ಮಾಡುತ್ತಿದ್ದರು (ಲೂಕ 18:12), ಸಾಮಾನ್ಯವಾಗಿ ಸೋಮವಾರ ಮತ್ತು ಗುರುವಾರ ಸಂತೆಯ ದಿನಗಳಾಗಿರುವದರಿಂದ ಉಪವಾಸ ಮಾಡುತ್ತಿದ್ದರು.[29] ಇದು ಅವರಿಗೆ ತಮ್ಮ ಭಕ್ತಿಶ್ರಮೆಯನ್ನು ಜನರಿಗೆ ತಮ್ಮ ಪ್ರಭಾವ ತೋರಿಸಲು ಅವಕಾಶ ಕೊಡುವಂಥದ್ದಾಗಿತ್ತು. **ಮುಖವನ್ನು ಸಪ್ಪಗೆ ಮಾಡಿಕೊಳ್ಳುವದು** ಮತ್ತು **ಮುಖವನ್ನು ವಿಕಾರ ಮಾಡಿಕೊಳ್ಳುವದ**ರಿಂದ ಅವರು ಉಪವಾಸ ವಿದ್ದಾರೆ ಎಂದು ಗಮನಿಸಬಹುದೆಂದುಕೊಂಡವರ ಕುರಿತು ಯೇಸು ಮಾತನಾಡಿದನು. ಅವರು ಬಿಳಿಯಾಗಿ, ಅಸಯ್ಯವಾಗಿ ಕಾಣಲು ಮುಖದ ಮೇಲೆ ಪುಡಿಯನ್ನು ಹಾಕಿಕೊಂಡಿರುತ್ತಾರೆ. ಮತ್ತೊಂದಾವರ್ತಿ, ಅಂಥಹ ಕಪಟಿಗಳು - ಅವರು ದೇವರ ಮುಂದೆ ದೀನತೆಯುಳ್ಳವರಾಗಿ ಬಹಿರಂಗವಾಗಿ ತೋರ್ಪಡಿಸಿಕೊಳ್ಳುವವರು - **ತಮ್ಮ ಪೂರ್ಣಫಲಹೊಂದುವರು** ಎಂದು ಯೇಸು ಹೇಳಿದರು.

**ವಚನಗಳು 17, 18.** ಭಿನ್ನವಾಗಿ, ಯೇಸು ತನ್ನ ಶಿಷ್ಯರಿಗೆ ಉಪವಾಸವು ಇನ್ನೊಬ್ಬರು ನೋಡುವದಕ್ಕಾಗಿ ಮಾಡಬಾರದು ಎಂದು ಹೇಳಿದನು. ಯೆಹೂದ್ಯರ ಸಂಪ್ರದಾಯಕ್ಕೆ ವಿರುದ್ಧವಾಗಿ, ಯೇಸು ತನ್ನ ಶಿಷ್ಯರಿಗೆ ಉಪವಾಸ ಮಾಡುವಾಗ ತಲೆಗೆ ಎಣ್ಣೆ ಹಚ್ಚಿಕೊಡಬೇಕು ಮತ್ತು (ತನ್ನ) ಮುಖವನ್ನು ನೀರಿನಿಂದ ತೊಳೆದುಕೊಳ್ಳಬೇಕೆಂದು ಹೇಳಿದನು.[30] ಒಬ್ಬನು ತನ್ನ ನೀತಿಯನ್ನು ಅಂತರಂಗದಲ್ಲಿ ಕಾಪಾಡಿಕೊಳ್ಳಬೇಕು ಎನ್ನುವ ವಿಷಯಕ್ಕೆ ಯೇಸು ಸಂಬಂಧಪಟ್ಟವನಾಗಿದ್ದನು ಎನ್ನುವದು ಸ್ಪಷ್ಟವಾಗಿದೆ. ಉಪವಾಸಕ್ಕೆ ಸಂಬಂಧಿಸಿದ ಸಂಪ್ರದಾಯದ ವೈಶಿಷ್ಟ್ಯಗಳಿಗೆ ಕಟಬದ್ಧರಾಗಿರಬೇಕೆನ್ನುವ ಆತನ ಸಮಕಾಲಿಕರಿಗೆ ವಿರೋಧವಾಗಿ ಯೇಸು ಹೋದನು.[31] ಕೆಲವು ಸಮಯದಲ್ಲಿ ಉಪವಾಸವನ್ನು ರಹಸ್ಯವಾಗಿ ಇಟ್ಟುಕೊಳ್ಳುವದು ಕಷ್ಟವಾಗುತ್ತದೆ (ನೋಡಿರಿ 6:4, 6ರ ಮೇಲಿನ ವ್ಯಾಖ್ಯಾನ), ಆದರೆ ಶಿಷ್ಯರು ಉಪವಾಸವನ್ನು ರಹಸ್ಯವಾಗಿ ಮಾಡಲು ಪ್ರಯತ್ನಿಸಬೇಕು. ಯೇಸುವಿನ ಹಿಂಬಾಲಕರು ಅವರ ನೀತಿಕಾರ್ಯಗಳನ್ನು ಬಹಿರಂಗವಾಗಿ ಪ್ರಚಾರಮಾಡಬಾರದೆಂಬುದೇ ಅಂಶವಾಗಿತ್ತು. ಅವರು ದೀನತೆಯಿಂದ ಉಪವಾಸ ಮಾಡಿದರೆ, ದೇವರು ಅವರಿಗೆ ಫಲವನ್ನು ಕೊಡುವನು.

### ಪಾಠಗಳು

## ಹೃದಯಪೂರ್ವಕವಾಗಿ ಕೊಡುವದು (6:2-4)

ಮತ್ತಾಯ 6:1-18ರಲ್ಲಿ ಯೇಸು ನೀತಿಯ ಕಾರ್ಯಗಳನ್ನು ನೆರವೇರಿಸುವದರ ಕುರಿತು ಚರ್ಚಿಸಿದನು, ಅದರಲ್ಲಿ ಕೊಡುವದು, ಪ್ರಾರ್ಥಿಸುವದು, ಮತ್ತು ಉಪವಾಸವು ಒಳಗೊಂಡಿದ್ದವು. ಇವುಗಳ ಮೊದಲಿನ ಭಾಗದಲ್ಲಿ (6:2-4), ಕೊಡುವದರ ಕುರಿತಾಗಿ ಮೂರು ಪಾಠಗಳನ್ನು ಕಲಿಯುತ್ತೇವೆ.

*ಮೊದಲನೆಯದಾಗಿ, ದೇವರ ಕಡೆಗೆಯಿರುವ ಪ್ರೀತಿಯಿಂದ ಕೊಡಬೇಕು, ನಮ್ಮ ಸುತ್ತಲು ಇರುವ ಜನರು ನೋಡುವದಕ್ಕಾಗಿ ಅಲ್ಲ.* ಇತರರು ಗಮನಹರಿಸುವಂತೆ ಕೊಡುವದರ ವಿರುದ್ಧವಾಗಿ ತನ್ನ ಶಿಷ್ಯರಿಗೆ ಎಚ್ಚರಿಸಿದನು. ಅನನಿಯ ಮತ್ತು ಸಪ್ಫೈರ್ಯಳ ದೃಷ್ಟಾಂತವು ನಿಯಮವನ್ನು ಚೆನ್ನಾಗಿ ವಿವರಿಸುತ್ತದೆ. ದಂಪತಿಗಳು ತಮ್ಮ ಸ್ವತ್ತನ್ನು ಮಾರಿದರು, ತರುವಾಯ ಅನನಿಯನು ಸ್ವಲ್ಪ ಭಾಗವನ್ನು ಅಪೊಸ್ತಲರ ಪಾದಗಳ ಬಳಿಯಲ್ಲಿ ಇಟ್ಟನು. ಅದೆಲ್ಲವನ್ನು ಕೊಡುವಂತೆ ನಟಿಸಿ ಆತನಿಗೋಸ್ಕರ ಸ್ವಲ್ಪ ಹಣವನ್ನು ಇಟ್ಟುಕೊಂಡನು. ಇದನ್ನು ತನ್ನ ಹೆಂಡತಿಯ ಸಂಪೂರ್ಣ ಸಹಕಾರದಿಂದ ಮಾಡಿದನು. ಅವರಿಬ್ಬರು ಸೇರಿ ಮಾಡಿರುವ ವಂಚನೆಗೆ ಫಲ ಮರಣ; ಅವರ ಕಪಟತನಕ್ಕೆ ದೇವರು ಅವರನ್ನು ಉದಾಹರಣೆಯಾಗಿ ಇಟ್ಟನು (ಅಪೊಸ್ತಲರ ಕೃತ್ಯಗಳು 5:1-11). ಯೇಸು ಹೇಳಿದ್ದೇನೆಂದರೆ ಇತರರು ನೋಡಲಿ

ಎಂದು ಕೊಡುವವರು ಅವರಿಗೆ "ಅವರ ಪೂರ್ಣ ಫಲ ಹೊಂದುವರು" - ಜನರ ಪ್ರಶಂಸೆಗೆ ಮಾಡುವದು ಕೇವಲ ಅವರು ತಮ್ಮ ಫಲವನ್ನು ಸ್ವಿಕರಿಸುವರು. ಅದರ ಬದಲಾಗಿ, ಕ್ರೈಸ್ತರು ಕೊಡುವಾಗ ದೇವರಿಗಾಗಿರುವ ಪ್ರೀತಿಯಿಂದ ಹರಿದು ಹೃದಯದಿಂದ ಕೊಡಬೇಕು. "ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ" ಯೋಹಾನನು ಬರೆದಿದ್ದಾನೆ (1 ಯೇಹಾನ 4:19). ದೇವರನ್ನು ಗೌರವಿಸಲು ನಾವು ಕೊಡುವಾಗ, ಆತನು ನಮಗೆ ಅಂತಿಮವಾಗಿ ಫಲಕೊಡುವನು.

*ಎರಡನೆಯದಾಗಿ, ನಾವು ವಿವೇಚನೆಯುಳ್ಳವರಾಗಿ ಕೊಡಬೇಕು.* ಕೊಡುವದರ ವಿಷಯದಲ್ಲಿ, "ನಿನ್ನ ಬಲಗೈ ಮಾಡಿದ್ದು ಎಡಗೈಗೂ ತಿಳಿಯದಿರಲಿ" ಯೇಸು ಹೇಳಿದನು. ಕೊಡುವದು ಸಾಧ್ಯವಾದಷ್ಟು ವಿವೇಚನೆಯಿಂದ ಮಾಡಿಕೊಡಬೇಕೆಂಬುದು ಲೋಕರೂಢಿಯ ಗಾದೆಯಂತೆ ಇರಬಹುದು. ನಾವು ಕೊಡುವಾಗ, ನಮ್ಮ ಉದಾರತೆಯನ್ನು ಇತರರ ಮುಂದೆ ಕವಾಯತನ್ನು ಮಾಡಬಾರದು.

*ಮೂರನೆಯದಾಗಿ, ಕೊಡುವಾಗ ನಿಜವಾಗಿಯೂ ಅದು ಇತರರಿಗೆ ಸಹಾಯ ಆಗುವದಕ್ಕಾಗಿ ಕೊಡಬೇಕು.* ಯೆಹೂದ್ಯರು ಬಡವರಿಗೆ ಉದಾರವಾಗಿ ಕೊಡುವದರ ಆಚರಣೆಯ ಕುರಿತು ಯೇಸು ವ್ಯವಹರಿಸುತ್ತಿದ್ದಾನೆ. ಸ್ವತಃ ಯೇಸು ಕರುಣೆಯ ವಿಷಯದಲ್ಲಿ ಮಾದರಿಯಾಗಿದ್ದಾನೆ, ಇತರರ ಅಗತ್ಯತೆಗಳ ಕುರಿತು ಕಾಳಜಿವಹಿಸುತ್ತಿದ್ದನು. ಇವುಗಳಲ್ಲಿ ಕೆಲವು ಶಾರೀರಿಕ ಸಮಸ್ಯೆಗಳಾಗಿದ್ದವು (ಹಸಿವು, ಅನಾರೋಗ್ಯ, ರೋಗ, ಮತ್ತು ಮರಣ), ಇನ್ನೂ ಕೆಲವು ಆತ್ಮೀಕ ಸಮಸ್ಯೆಗಳಿದ್ದವು (ಅಲಕ್ಷ್ಯತನ, ದೆವ್ವದ ಪೀಡೆ, ಮತ್ತು ಆತ್ಮೀಕ ಮರಣ). ನಮ್ಮ ಕೊಡುವಿಕೆಯು ಇತರರ ಸಂಕಷ್ಟಗಳನ್ನು ಶಮನಮಾಡುವ ಉದ್ದೇಶ ಹೊಂದಿರಬೇಕು. "ಸಂಕಟದಲ್ಲಿ ಬಿದ್ದ ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಪರಾಮರಿಸಿ ತನಗೆ ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂಡಿರುವದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ ನಿರ್ಮಲವೂ ಆಗಿರುವ ಭಕ್ತಿ" (ಯಾಕೋಬ 1:27) ಎಂದು ಯಾಕೋಬನು ಬರೆಯುತ್ತಾನೆ. "ಪರಾಮರಿಸಿಸುವದು" ಎಂಬುದರ ಆತನ ಅರ್ಥವೇ ನೆಂಬುದನ್ನು ತಿಳಿಸಿದನು: "ಒಬ್ಬ ಸಹೋದರನಿಗೆ ಇಲ್ಲವೇ ಒಬ್ಬ ಸಹೋದರಿಗೆ ಬಟ್ಟೆಯೂ ಆ ದಿನದ ಆಹಾರವೂ ಇಲ್ಲದೆ ಇರುವಾಗ ನಿಮ್ಮಲ್ಲಿ ಒಬ್ಬನು ಅವರಿಗೆ ದೇಹಕ್ಕೆ ಬೇಕಾದದ್ದನ್ನು ಕೊಡದೆ - ಸಮಾದಾನದಿಂದ ಹೋಗಿರಿ, ಬೆಂಕಿಕಾಯಿಸಿಕೊಳ್ಳಿ, ಹೊಟ್ಟೆ ತುಂಬಿಸಿಕೊಳ್ಳಿ ಎಂದು ಬರೀ ಮಾತು ಹೇಳಿದರೆ ಪ್ರಯೋಜನವೇನು?" (ಯಾಕೋಬ 2:15, 16). ಜನರು ಅವಶ್ಯಕತೆಯಲ್ಲಿರುವಾಗ ಅವರಿಗೆ ಕೇವಲ ಅನುಕಂಪದ ಅನಿಸಿಕೆಗಳು ಎಂದಿಗೂ ಅವರಿಗೆ ಸಹಾಯಮಾಡುವದಿಲ್ಲ; ಅವರ ಯಾತನೆಯನ್ನು ತೆಗೆದುಹಾಕಲು ನಾವು ಏನಾದರೂ ಮಾಡಲೇಬೇಕು. ಉದಾರವಾದ ಕರುಣೆಯಿಂದ ನಮ್ಮನ್ನು ನೋವು ಮಾಡುವವರಿಗೂ ನಾವು ಅವರ ನೋವಿನಲ್ಲಿ ಸಹಾಯ ಮಾಡಬೇಕು ಎಂದು ಯೇಸುವಿನ ಬೋಧನೆಗಳು ಪರೋಕ್ಷ ವಾಗಿ ಸೂಚಿಸುತ್ತವೆ.

ನಮ್ಮ ಬಹುಮಾನಗಳು ದೇವರ ದೃಷ್ಟಿಯಲ್ಲಿ ಬೆಲೆಯುಳ್ಳವುಗಳಾಗಿರಬೇಕಾದರೆ ಜನರ ದೃಷ್ಟಿಯಲ್ಲಿ ಶ್ರೇಷ್ಟವಾಗಿರಬೇಕಾಗಿಲ್ಲ. "ಎರಡು ಕಾಸು" ಹಾಕಿದ ಒಬ್ಬ ವಿದುವೆಯ ಕೊಡುಗೆಯು ಯೇಸುವಿನ ಮನಸ್ಸನ್ನು ಸೆಳೆಯಿತು (ಮಾರ್ಕ 12:41-44). ನಿಜವಾದಂತಹ ಉದಾರತೆಯು ಬಟ್ಟೆ ಹೊದಿಸುವದು, ಬಿಸಿಯಾದ ಊಟ, ಅಥವಾ ಒಂದು ತಂಬಿಗೆಯಲ್ಲಿ ತಣ್ಣೀರು ಕೊಡುವಂತಹವುಗಳನ್ನು ಒಳಗೊಂಡು ಬಹಳ ಸರಳವಾಗಿರುತ್ತದೆ (10:42; 25:34-40).

## ಪ್ರಾರ್ಥನೆ (6:5-8)

ನಾವು ಕೇಳುವದಕ್ಕಿಂತ ಮುಂಚೆ ತಂದೆಗೆ ನಮ್ಮ ಅವಶ್ಯಕತೆ ತಿಳಿದಿರುತ್ತದೆ, ನಾವು ಯಾಕೆ ಕೇಳಬೇಕು? ನಮಗೇನು ಬೇಕೆಂದು ದೇವರಿಗೆ ಗೊತ್ತಿದೆ, ಆದರೆ ನಾವು ಇನ್ನೂ

ಆತನೊಂದಿಗೆ ಮಾತನಾಡಬೇಕೆಂದು ಆತನ ಇಷ್ಟವಾಗಿದೆ (7:7; ಫಿಲಿಪ್ಪಿ 4:6). ಕೆಲವು ಸಾರಿ ನಾವು ಪುನಃ ಪುನಃ ಕೇಳಬೇಕೆಂದು ಆತನು ಬಯಸುತ್ತಾನೆ. ಈ ಸತ್ಯವನ್ನು ವಿವರಿಸಲು ಆತನು ಎರಡು ಉದಾಹರಣೆಗಳನ್ನು ಹೇಳಿದನು, ಒಂದು ಒಬ್ಬ ಸ್ನೇಹಿತನು ಮಧ್ಯರಾತ್ರಿಯಲ್ಲಿ ಬಂದದ್ದು (ಲೂಕ 11:5-10) ಮತ್ತು ಇನ್ನೊಂದು ಹಟಮಾರಿ ವಿಧವೆ (ಲೂಕ 18:1-8). ಯೇಸು ಗೆತ್ಸೆಮನೆಯಲ್ಲಿ ಒಂದೇ ವಿಷಯವನ್ನು ಮೂರು ಸಾರಿ ಪ್ರಾರ್ಥಿಸಿದಂತೆ (26:36-46), ಪೌಲನು "ತನ್ನ ದೇಹದಲ್ಲಿರುವ ಮುಳ್ಳನ್ನು" ತೆಗೆದು ಹಾಕುವಂತೆ ದೇವರಿಗೆ ಮೂರು ಸಾರಿ ಪ್ರಾರ್ಥಿಸಿದನು (2 ಕೊರಿಂಥ 12:7-10). ನಮ್ಮ ಉದ್ದವಾದ ಅಥವಾ ಸಂಕ್ಷಿಪ್ತವಾದ ಪ್ರಾರ್ಥನೆಗಳ ಬಗ್ಗೆ ದೇವರು ಆಸಕ್ತಿವಹಿಸದೆ ನಾವು ಪೂರ್ಣವಾಗಿ ಪ್ರಾರ್ಥಿಸದೆ ಇರುವದರ ಬಗ್ಗೆ ಆಸಕ್ತಿವಹಿಸಿದ್ದಾರೆ. ನಮ್ಮ ಬಯಕೆಗಳನ್ನು ಅಂಗಿಕರಿಸುವಂತೆ ದೇವರನ್ನು ಪೀಡಿಸಬಾರದು, ಆದರೆ ನಿರ್ದಿಷ್ಟ ಪ್ರಾರ್ಥನೆಗೆ ಆತನ ಉತ್ತರದ ಅಗತ್ಯತೆಯಿದೆ ಎನ್ನುವದನ್ನು ನಾವು ಅರ್ಥಮಾಡಿಕೊಳ್ಳಬೇಕೆಂದು ದೇವರು ಬಯಸುತ್ತಾರೆ.

ಸರಿಯಾದ ಪ್ರಾರ್ಥನೆಯು ಚಿತ್ತಶುದ್ಧಿ ಹೃದಯ ಮತ್ತು ಒಳ್ಳೆಯ ಉದ್ದೇಶ ಒಳಗೊಂಡಿರುತ್ತದೆ. ಭರವಸೆಯಿಂದ ದೇವರಿಗೆ ಪ್ರಾರ್ಥಿಸಬೇಕು ಮತ್ತು ತನ್ನ ಮಕ್ಕಳ ಪ್ರತಿಯೊಂದು ಪ್ರಾರ್ಥನೆ ಕೇಳುತ್ತಾನೆ ಮತ್ತು ತನ್ನ ಮಕ್ಕಳಿಗೆ ಒಳ್ಳೆಯದನ್ನೆ ಕೊಡುತ್ತಾನೆ (1 ಯೋಹಾನ 5:14, 15) ಎಂಬವು ಸಹ ಒಳಗೊಂಡಿರುತ್ತವೆ. "ದೇವರ ಚಿತ್ತದ ಪ್ರಕಾರವೇ" ನಾವು ಪ್ರಾರ್ಥಿಸಬೇಕು. ದೇವರ ಚಿತ್ತವನ್ನು ಮಾಡದೆ "ನಿನ್ನ ಚಿತ್ತವೇ ನೆರವೇರಲಿ" ಎಂದು ನಾವು ಸಹೃದಯದಿಂದ ಪ್ರಾರ್ಥಿಸಲಾಗದು. ದೇವರ ಚಿತ್ತ ಪ್ರಕಾರ ಪ್ರಾರ್ಥಿಸುವದಕ್ಕಾಗಿ, ದೇವರ ಚಿತ್ತವನ್ನು ತಿಳಿದುಕೊಳ್ಳಲು ಆತನ ವಾಕ್ಯವನ್ನು ಅಧ್ಯಯನ ಮಾಡಬೇಕು. "ನಿನ್ನ ಚಿತ್ತ ನೆರವೇರಲಿ" ಎಂದು ಸಹೃದಯದಿಂದ ಪ್ರಾರ್ಥಿಸುವಾಗ ನಮ್ಮ ಪ್ರಾರ್ಥನೆಗಳಿಗೆ ಯಾವಾಗಲು ಉತ್ತರ ಕೊಡುವನು. ಆತನು "ಹೌದು," "ಇಲ್ಲ," ಅಥವಾ "ನಿರೀಕ್ಷಿಸು" ಎನ್ನುವ ಉತ್ತರಗಳು ಕೊಡಬಹುದು, ಆದರೆ ಆತನು ತನ್ನ ಜನರ ಪ್ರಾರ್ಥನೆಗೆ ಯಾವಾಗಲು ಉತ್ತರಿಸುವನು.

## ಮಾದರಿಯ ಪ್ರಾರ್ಥನೆ (6:9-13)

ಯೇಸು ತನ್ನ ಶಿಷ್ಯರಿಗೆ ಪ್ರಾರ್ಥಿಸಲು ಕಲಿಸಿದಾಗ ಇಂದು ನಮ್ಮ ಪ್ರಾರ್ಥನೆಯ ಭಾಗಾಂಶ ವಾಗಿರಬೇಕಾದವುಗಳನ್ನು ಸಹ ಆ ಪ್ರಾರ್ಥನೆಯ ಐದು ಅಂಶಗಳಲ್ಲಿ ಸಂಯೋಜಿಸಿದ್ದಾನೆ.

*ಮೊದಲನೆಯದಾಗಿ, ನಾವು ತಂದೆಗೆ ಸ್ತೋತ್ರವನ್ನು ಸಲ್ಲಿಸಬೇಕು* (6:9). ದೇವರು ನಮ್ಮ ಸೃಷ್ಟಿಕರ್ತನು ಸ್ತೋತ್ರಕ್ಕೆ ಯೋಗ್ಯನಾಗಿದ್ದಾನೆ, ಕಾಪಾಡುವವನು, ಮತ್ತು ವಿಮೋಚಕನು ಆಗಿದ್ದಾನೆ. ಆತನ ಗುಣಾತಿಶಯಗಳಾದ ಪ್ರೀತಿ, ಪರಿಶುದ್ಧತೆ, ಕರುಣೆ, ಮತ್ತು ಕೃಪೆಗಾಗಿ ಆತನಿಗೆ ಸ್ತೋತ್ರ ಸಲ್ಲಿಸಬೇಕು (ಪ್ರಕಟಣೆ 4:8-11).

*ಎರಡನೆಯದಾಗಿ, ನಾವು ಆತನ ರಾಜ್ಯಕ್ಕೆ ಪ್ರಾಮುಖ್ಯತೆಕೊಡಬೇಕು* (6:10). ಯೇಸು ಈಗಾಗಲೇ ತನ್ನ ಸಭೆಯೆಂಬ ರಾಜ್ಯವನ್ನು ಸ್ಥಾಪಿಸಿದ್ದಾನೆ (16:18, 19; ಅಪೊಸ್ತಲರ ಕೃತ್ಯಗಳು 2). ಹಾಗಿದ್ದರೂ, ನಾವು ಇಂದು ಸಹ ಆತನ ರಾಜ್ಯದ ಬೆಳವಣಿಗೆಗಾಗಿ ಪ್ರಾರ್ಥಿಸಬೇಕು, ನಮ್ಮ ಸುವಾರ್ತಿಕರಿಗಾಗಿ, ಮತ್ತು ಪ್ರತಿಯೊಬ್ಬ ಬೋಧಕರಿಗಾಗಿ ಮತ್ತು ಕಲಿಸುವವರಿಗಾಗಿ ಯಾರು ನಂಬಿಕೆಯಿಂದ ದೇವರ ವಾಕ್ಯವನ್ನು ಸಾರುವ ಕಾರ್ಯಮಾಡುತ್ತಿದ್ದಾರೋ ಅವರಿಗಾಗಿ ನಾವು ಪ್ರಾರ್ಥಿಸಬೇಕು.

*ಮೂರನೆಯದಾಗಿ, ನಮ್ಮ ಆಹಾರಕ್ಕಾಗಿ ಪ್ರಾರ್ಥಿಸಬೇಕು* (6:11). ದೇವರಿಗೆ ನಮ್ಮ ಅಗತ್ಯತೆಗಳು ತಿಳಿದಿವೆ (6:32), ಆದರೆ ನಾವು ನಮ್ಮ ಮೂಲ ಅವಶ್ಯಕತೆಗಳಿಗಾಗಿ ದೇವರನ್ನು ಪ್ರಾರ್ಥನೆ ಮುಖಾಂತರ ಕೇಳಿಕೊಳ್ಳಬೇಕು - ಅಂಥವುಗಳಲ್ಲಿ ಆಹಾರ, ಬಟ್ಟೆ ಮತ್ತು ವಾಸಸ್ಥಳ ಸೇರಿವೆ. ಕಳೆದ ದಿನಗಳಲ್ಲಿ ಆತನು ಮಾಡಿದ ಕಾರ್ಯಗಳಿಗಾಗಿ ನಾವು ಸ್ತೋತ್ರ ಹೇಳಬೇಕು ಮತ್ತು ಮುಂದೆ ನಮ್ಮನ್ನು ಕಾಪಾಡುವದಕ್ಕಾಗಿ ಕೇಳಬೇಕು.

*ನಾಲ್ಕನೆಯದಾಗಿ, ನಮ್ಮ ಪಾಪಕ್ಕಾಗಿ ಕ್ಷಮಾಪಣೆ ಕೇಳಬೇಕು* (6:12). ಕ್ರೈಸ್ತರು ಹಿಂದಿನ ಪಾಪಗಳಿಂದ ರಕ್ಷಿಸಲ್ಪಟ್ಟರು, ದೇವರ ಬಯಸಿದಕ್ಕಿಂತ ನಾವು ಕಡಿಮೆಯಾಗಿದ್ದೇವೆ. ಕ್ರಿಸ್ತನ ರಕ್ತದಿಂದ ನಿರಂತರವಾಗಿ ತೊಳೆದುಕೊಳ್ಳುವದು ಅವಶ್ಯವಾಗಿದೆ ಮತ್ತು ಪ್ರಾರ್ಥನೆಯಲ್ಲಿ ಕ್ಷಮಾಪಣೆಯನ್ನು ಕೇಳಬೇಕು (1 ಯೋಹಾನ 1:7-10). ದೇವರಿಂದ ನಾವು ಕ್ಷಮಾಪಣೆ ನಿರೀಕ್ಷಿಸುವುದಾದರೆ ನಾವು ಇತರರನ್ನು ಕ್ಷಮಿಸುವ ಮನಸ್ಸನ್ನು ತೋರಿಸಬೇಕಾಗುತ್ತದೆ.

*ಐದನೆಯದಾಗಿ, ನಾವು ಸೈತಾನನಿಂದ ಕಾಪಾಡುವಂತೆ ಕೇಳಬೇಕು* (6:13). ನಾವು ಯಾವಾಗಲು ಆತ್ಮೀಕ ಯುದ್ಧದಲ್ಲಿ ಎಚ್ಚರವಾಗಿದ್ದು ನಮ್ಮ ಸುತ್ತಲು ಗಂಭೀರವಾದ, ಉಗ್ರವಾದ, ವಿಷಯಗಳಿಗಾಗಿ ಎಚ್ಚರವಾಗಿರಬೇಕು (ಎಫೆಸ 6:10-20) ಮತ್ತು ಶೋಧನೆ ಯಿಂದ ಕಾಪಾಡಲು ದೇವರನ್ನು ಕೇಳಿಕೊಳ್ಳಬೇಕು ಮತ್ತು ಪವಿತ್ರಾತ್ಮನ ಬಲದಿಂದ ಈ ಎಲ್ಲಾ ಸಂಕಷ್ಟಗಳನ್ನು ಜಯಿಸುವದಕ್ಕಾಗಿ ಬಲವನ್ನು ಕೊಡುವಂತೆ ಕೇಳಿಕೊಳ್ಳಬೇಕು.

David Stewart

## ಮಾದರಿಯ ಪ್ರಾರ್ಥನೆಯ ಪುನರುಕ್ತಿ (6:9-13)

ಮಾದರಿಯ ಪ್ರಾರ್ಥನೆಯು ಪುನಃ ಪುನಃ ಪ್ರಾರ್ಥಿಸಬೇಕೆಂದು ಉದ್ದೇಶಿಸಿಲ್ಲ. ಇದನ್ನು ಕರ್ತನು ತನ್ನ ಶಿಷ್ಯರಿಗೆ ಉದಾಹರಣೆಯಾಗಿ ಪ್ರಾರ್ಥನೆಯ ಮೂಲಾಂಶಗಳನ್ನು ಕಲಿಯುವದಕ್ಕಾಗಿ ಕೊಟ್ಟನು (ಲೂಕ 11:1-4). ಸುಮ್ಮ ಸುಮ್ಮನೆ ಪ್ರಾರ್ಥನೆಯನ್ನು ಪದೆ ಪದೆ ಉಚ್ಚರಿಸುವದರಿಂದ ಯೇಸು ಈಗಾಗಲೇ ಹೇಳಿರುವ ಹಾಗೆ "ಅರ್ಥವಿಲ್ಲದ ಪುನರುಕ್ತಿಯನ್ನು" ಬಿಡಬೇಕು ಎಂದು ಹೇಳಿದ್ದನ್ನು ನಿಷೇಧಿಸುತ್ತದೆ (6:7). ಯೆಹೂದ್ಯರು ಅನೇಕ ಪದಗಳನ್ನೊಳಗೊಂಡ ಹಳೆಯದಾದ ಪ್ರಾರ್ಥನೆ ಮಾಡುತ್ತಿದ್ದರಿಂದ ತರುವಾಯ ಅದರ ಅರ್ಥವೇ ಹೋಗಿಬಿಟ್ಟಿತು. ಯಾರು ಪ್ರಾರ್ಥನೆಯ ಪುಸ್ತಕ ಉಪಯೋಗಿಸುತ್ತಿದ್ದರೋ ಅವರು ಸಹ ಅಂತಹದನ್ನೆ ಮಾಡುತ್ತಿದ್ದಾರೆ. ಅವರು ಅದನ್ನು ಸುಮ್ಮನೆ ಓದುವದು ಇಲ್ಲವೆ ಬಾಯಿಂದ ಆ ಭಾಗಗಳನ್ನು ಉಚ್ಚರಿಸಿ ಮುಕ್ತಾಯ ಮಾಡುತ್ತಿದ್ದರು ಅದರಲ್ಲಿ ಯಾವುದೇ ಅರ್ಥವಿರುತ್ತಿರಲಿಲ್ಲ. ಎಲ್ಲರ ಒಳತಿಗಾಗಿ, ನಾವುಗಳು ಸಹ ನಾವು ಯಾವಾಗ ಹೇಳಿದ್ದನ್ನೇ ಹೇಳುತ್ತಾ ಹೋಗುತ್ತೇವೋ ಅದು ನಮ್ಮ ಸಹೃದಯದಿಂದ ಬರುವ ಪ್ರಾರ್ಥನೆ ಆಗುವದಿಲ್ಲ. ಹೊಸ ಒಡಂಬಡಿಕೆಯಲ್ಲಿ - ಸುವಾರ್ತೆಗಳಲ್ಲಿ, ಅಪೊಸ್ತಲರ ಕೃತ್ಯಗಳಲ್ಲಿ, ಅಥವಾ ಪತ್ರಿಕೆಗಳಲ್ಲಿ ಯೇಸುವಿನ ಮಾದರಿ ಪ್ರಾರ್ಥನೆ ಗಟ್ಟಿಯಾಗಿ ಆದಿ ಕ್ರೈಸ್ತರು ಹೇಳಿದ್ದಾರೆಂದು ಕಂಡುಕೊಳ್ಳುತ್ತೇವೋ.[32] ಇದನ್ನು ನೆನಪು ಮಾಡಿಕೊಂಡು ಬಾಯಿಪಾಠ ಹೇಳುವದರಿಂದ ನಮಗೆ ಒಂದು ಲಾಭವಿದೆ ಮತ್ತು ಅವುಗಳನ್ನು ಇತರ ವಾಕ್ಯಭಾಗವನ್ನು ಬಾಯಿಪಾಠ ಮಾಡಿದಂತೆ ಮಾಡಬಹುದು ಅಥವಾ ಅದರ ಅರ್ಥವನ್ನು ನಮ್ಮ ಮೇಲೆ ಇಂದು ಪ್ರತಿಬಿಂಬಿಸುವಂತೆ ಮಾಡಬಹುದು. ಹಾಗಿದ್ದರೂ, ಯೇಸು ಇದನ್ನು ಧಾರ್ಮಿಕ ಆಚರಣೆಯಂತೆ ಪುನಃ ಪುನಃ ಪ್ರಾರ್ಥಿಸುವ ಉದ್ದೇಶ ಹೊಂದಿರಲಿಲ್ಲ.

## "ನಮ್ಮ ತಂದೆ" (6:9)

ಯಾರು ದೇವರ ಕುಟುಂಬದಲ್ಲಿ "ಹೊಸದಾಗಿ ಹುಟ್ಟುತ್ತಾರೋ" ಅವರು ಮಾತ್ರವೇ ಆತ್ಮೀಕ ತಂದೆಯನ್ನು ಪಡೆದುಕೊಳ್ಳುಬಹುದು (ಯೋಹಾನ 3:3 ಮತ್ತಾಯ 23:9). ಒಂದು ರೀತಿಯಲ್ಲಿ, ಆತನು ನಮ್ಮನ್ನು ವಂಶಾನುಕ್ರಮವಾಗಿ ಹುಟ್ಟಿಸಿದ್ದರಿಂದ ಎಲ್ಲಾ ಜನರು ದೇವರ ಮಕ್ಕಳಾಗಿದ್ದಾರೆ, ಆದರೆ ಕೇವಲ ಯಾರು "ಪುನರ್ಜನ್ಮ" ಹೊಂದುತ್ತಾರೋ ಅವರು ಆತನ ಆತ್ಮೀಕ ಮಕ್ಕಳಾಗುತ್ತಾರೆ. ಇಂದು ಕೆಲವರು ದೇವರೊಂದಿಗೆ "ಮಗನ ಹಕ್ಕನ್ನು" ತಮಗಿರುವ ನಂಬಿಕೆಯ ಆಧಾರದ ಮೇಲೆ ಮಾತ್ರ ಹೊಂದಲು ಇಷ್ಟಪಡುತ್ತಾರೆ, ಆದರೆ ಅದು ಸಾಕಾಗುವದಿಲ್ಲ (ಗಲಾತ್ಯ 3:26, 27). ಕೆಲವರು ಹೊಸದಾಗಿ ಹುಟ್ಟುವದರಲ್ಲಿ ನೀರನ್ನು

ಬಿಡಲು ಇಷ್ಟಪಡುತ್ತಾರೆ, ಆದರೆ "ಒಬ್ಬನು ನೀರಿನಿಂದಲೂ ಮತ್ತು ಆತ್ಮನಿಂದಲೂ" ಹುಟ್ಟದಿದ್ದರೆ ಅವರು ದೇವರಿಗೆ ಆತ್ಮೀಕ ಮಗ ಅಥವಾ ಮಗಳು ಆಗುವದಕ್ಕೆ ಸಾಧ್ಯವಿಲ್ಲ (ಯೋಹಾನ 3:5). ದೇವರಿಗೆ ಮಲಮಕ್ಕಳು ಇಲ್ಲ. ದೇವರ ಮಕ್ಕಳಾಗಿರುವದು ಒಂದು ಆಶೀರ್ವಾದ ಅದು ಪ್ರಾರ್ಥನೆಗೆ ಉತ್ತರ ಸಿಕ್ಕಿರುವ ವಾಗ್ದಾನವಾಗಿದೆ (1 ಪೇತ್ರನು 3:12; 1 ಯೋಹಾನ 5:14, 15). ನಾವು ಕ್ರೈಸ್ತರಾಗಿದ್ದರೆ, ದೇವರು ನಮ್ಮ ತಂದೆ - "ಪರಲೋಕದಲ್ಲಿರುವ ನಮ್ಮ ತಂದೆ." ಪರಲೋಕದ ಎಲ್ಲಾ ಆಶೀರ್ವಾದಗಳು ನಾವು ಪ್ರಾರ್ಥನೆ ಮಾಡುವಾಗ ಅವೆಲ್ಲವುಗಳು ನಮಗೆ ಹಸ್ತಾಂತರವಾಗುತ್ತವೆ. "ಆತನು ... ಪರಲೋಕದಲ್ಲಿನ ಸಕಲ ಆತ್ಮೀಯ ವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ" (ಎಫೆಸ 1:3) ಎಂದು ಪೌಲನು ಬರೆಯುತ್ತಾನೆ. ದೇವರು ತನ್ನ ಮಕ್ಕಳನ್ನು ಆಶೀರ್ವದಿಸಲು ಇಚ್ಛೆಯುಳ್ಳವನಾಗಿದ್ದಾನೆ (7:7-11).

## "ನಿನ್ನ ರಾಜ್ಯವು ಬರಲಿ" (6:10)

ರಾಜ್ಯವು ಬರಲಿ ಎನ್ನುವ ಪ್ರಾರ್ಥನೆಗೆ ಪಂಚಶತ್ತಮ ದಿನದಂದು ಉತ್ತರ ಸಿಕ್ಕಿತು (ಅಪೊಸ್ತಲರ ಕೃತ್ಯಗಳು 2). ಇಂದು ದೇವರ ರಾಜ್ಯವು ಬರಲಿ ಎಂದು ಕ್ರೈಸ್ತರು ಪ್ರಾರ್ಥಿಸುವದು ಸರಿಯಾದದ್ದಲ್ಲವಾದರೂ, "ಪರಲೋಕದಲ್ಲಿ ನೆರವೇರಿದಂತೆಯೇ ಭೂಲೋಕದಲ್ಲಿಯೂ" ನಿನ್ನ ಚಿತ್ತವೆ ನೆರವೇರಲಿ ಎಂದು ಪ್ರಾರ್ಥಿಸುವದು ನಮಗೆ ಒಳ್ಳೆಯದು. ಈಗ ದೇವರ ರಾಜ್ಯ ಇಲ್ಲಿದೆ, ಆತನನ್ನು ಗೌರವಿಸುವರೋ ಅವರ ಮುಖಾಂತರವೇ ಭೂಲೋಕದಲ್ಲಿ ದೇವರ ಚಿತ್ತವು ನೆರವೇರಿಸಲ್ಪಡುತ್ತದೆ. ದೇವರು ಸಾರ್ವಭೌಮನು, ಆದರೆ ಮಾನವನಿಗೆ ಸ್ವಯಿಚ್ಛೆಕೊಟ್ಟಿದ್ದಾನೆ. ಇದರ ಅರ್ಥ ನಾವು ಆತನ ಚಿತ್ತಮಾಡಬಹುದು ಇಲ್ಲವೆ ಅದನ್ನು ಬಿಡಬಹುದು.

ಈ ಪಾಠದ ಹಿನ್ನಲೆಯ ಆಧಾರದ ಮೇಲೆ, ಇಂದು ನಾವು ಏನನ್ನು ಪ್ರಾರ್ಥಿಸಬೇಕು? ಮೊದಲು ನಾವು ಪ್ರತಿಯೊಬ್ಬರು ನಮ್ಮ ಜೀವನದಲ್ಲಿ ದೇವರ ಚಿತ್ತನೆರವೇರಲಿ ಎಂದು ಪ್ರಾರ್ಥಿಸಬೇಕು. ಎರಡನೆಯದಾಗಿ, ಆತನು ಆಳ್ವಿಕೆಯು ಪರಲೋಕದಲ್ಲಿ ಆಳಿದಂತೆಯೆ ಭೂಲೋಕದಲ್ಲಿ ಆಳಬೇಕು ಎಂದು ಪ್ರಾರ್ಥಿಸುವದು ಒಳ್ಳೆಯದು. ಪ್ರತಿಯೊಬ್ಬ ಜವಾಬ್ದಾರಿಯುಳ್ಳ ವ್ಯಕ್ತಿಯು ತನ್ನ ಚಿತ್ತವನ್ನು ದೇವರ ಚಿತ್ತಕ್ಕೆ ಅನುಗುಣವಾಗಿ ಇರಬೇಕೆಂಬುದು ನಮ್ಮ ಪ್ರಾರ್ಥನೆಯಾಗಿರಬೇಕು.

## ಉಪವಾಸಕ್ಕಾಗಿ ಕಾರಣಗಳು (6:16-18)

ಕ್ರೈಸ್ತರಿಗೆ ಉಪವಾಸ ಮಾಡಬೇಕೆಂದು ಆಜ್ಞೆಕೊಡದೆ ಇದ್ದರೂ, ಯೇಸುವಿನ ಕೆಲವು ಮಾತುಗಳು ನೋಡುವಾಗ ಆತನ ಶಿಷ್ಯರು ಉಪವಾಸ ಮಾಡಬೇಕೆನ್ನುವ ಅಭಿಪ್ರಾಯ ನೋಡುತ್ತೇವೆ. ಈ ಅಭ್ಯಾಸವನ್ನು ಅಲಕ್ಷ್ಯ ಮಾಡುವದರಿಂದ ನಾವು ಶಾರೀರಿಕ ಮತ್ತು ಆತ್ಮೀಕ ಲಾಭಗಳನ್ನು ಕಳೆದುಕೊಳ್ಳಬಹುದು. ಉಪವಾಸದಲ್ಲಿ ನಿರತರಾಗಬೇಕೆಂದು ಹೇಳಲು ಕೆಲವು ಕಾರಣಗಳು ಇಲ್ಲಿವೆ:

1. ದೇವರ ದೃಷ್ಟಿಯಲ್ಲಿ ನಾವು ದೀನತೆಯಿಂದ ಇರುವದಕ್ಕಾಗಿ (1 ಅರಸು 21:27-29; ಎಜ್ರನು 8:21; ಕೀರ್ತನೆ 35:12, 13).
2. ನಮ್ಮ ಅಗತ್ಯತೆಗೆ ಸಂಬಂಧಿಸಿದ ವಿಷಯದ ಮೇಲೆ ಗಮನಹರಿಸಿ ಪ್ರಾರ್ಥನೆ ಮಾಡುವದಕ್ಕಾಗಿದೆ.
3. ನಮ್ಮ ಜೀವಿತದಲ್ಲಿ ಮೊದಲು ಆತ್ಮಿಕ ಸಂಗತಿಗಳನ್ನು ಮುಂದೆ ಇಡುವದಕ್ಕಾಗಿ. ಈ ಲೋಕದ ವಸ್ತುಗಳು ನಮ್ಮನ್ನು ಆಕರ್ಷಿಸುವದು ಕಡಿಮೆಯಾಗಬೇಕು ಮತ್ತು ದೇವರಿಗೆ ಮತ್ತು ಆತ್ಮೀಕ ವಿಷಯಗಳಿಗೆ ಹೆಚ್ಚು ಆಕರ್ಷಿಸುವದಕ್ಕಾಗಿ ಉಪವಾಸ

ಸಹಾಯ ಮಾಡಬಹುದು.

4. ಸ್ವನಿಯಂತ್ರಣ ಹೆಚ್ಚಿಸಲು ಮತ್ತು ಶೋಧನೆಯನ್ನು ತಡೆಯುವ ಸಾಮರ್ಥ್ಯ ಹೊಂದಲು ಇದು ಸಹಾಯ ಮಾಡುತ್ತದೆ. ಸ್ವನಿಯಂತ್ರಣ ಉತ್ತಮಪಡಿಸಲು ಉಪವಾಸಲು ನಡೆಸುತ್ತದೆ, ಉತ್ತಮಗೊಂಡಿರುವ ಸ್ವನಿಯಂತ್ರಣವು ಹೆಚ್ಚಿನ ಆತ್ಮೀಕ ಪಕ್ವತೆಗೆ ನಡಿಸುತ್ತದೆ, ಮತ್ತು ಆತ್ಮೀಕ ಪಕ್ವತೆಯು ದೇವರೊಂದಿಗೆ ಹೆಚ್ಚಿನ ಆತ್ಮೀಕತೆಗೆ ನಡೆಸುತ್ತದೆ.

ಟಿಪ್ಪಣಿಗಳು

[1]Craig S. Keener, *A Commentary on the Gospel of Matthew* (Grand Rapids, Mich.: Wm. B. Eerdmans Publishing Co., 1999), 207. Tobit 12:8 ಸೂಚಿಸಲಾಗಿದೆ. "ಉದಾರ ಧಾನ ಧರ್ಮ" "ಕೊಡುವದು," "ಪ್ರಾರ್ಥನೆ," ಮತ್ತು "ಉಪವಾಸ," ಇವೆಲ್ಲವು ಒಂದೇ ಕಡೆ ಸೇರಿಸಲಾಗಿದೆ ಆದರೆ "ನೀತಿಯು" ಪ್ರತ್ಯಕವಾಗಿ ಒಳಗೊಂಡಿದೆ. [2]Michael J. Wilkins, "Matthew," in *Zondervan Illustrated Bible Backgrounds Commentary*, vol. 1, *Matthew*, *Mark*, *Luke*, ed. Clinton E. Arnold (Grand Rapids, Mich.: Zondervan, 2002), 43. [3]Tobit 12:9 (NRSV). [4]Mishnah *Shekalim* 2.1; 6.1, 5. [5]Jack P. Lewis, *The Gospel According to Matthew*, Part 1, The Living Word Commentary (Austin, Tex.: Sweet Publishing Co., 1976), 98-99. [6]Ibid., 99. [7]Sirach 1:29. [8]Wilkins, 44. [9]Ceslas Spicq, *Theological Lexicon of the New Testament*, trans. and ed. James D. Ernest (Peabody, Mass.: Hendrickson Publishers, 1994), 1:162-64. [10]Robert H. Gundry, *Matthew: A Commentary on His Literary and Theological Art* (Grand Rapids, Mich.: Wm. B. Eerdmans Publishing Co., 1982), 102.

[11]Mishnah *Shekalim* 5.6. [12]Talmud *Baba Bathra* 9b. [13]Ibid., 10b. [14]David Hill, T*he Gospel of Matthew*, The New Century Bible Commentary (Grand Rapids, Mich.: Wm. B. Eerdmans Publishing Co., 1972), 133. [15] ನೋಡಿರಿ Josephus *Antiquities* 14.4.3. [16]*Didache* 8.3. [17]Robert H. Mounce, *Matthew*, New International Biblical Commentary (Peabody, Mass.: Hendrickson Publishers, 1991), 54-55. [18]Leon Morris, *The Gospel According to Matthew*, Pillar Commentary (Grand Rapids, Mich.: Wm. B. Eerdmans Publishing Co., 1992), 141, n. 22. [19]ಒಬ್ಬ ಯೆಹೂದ್ಯ ಗುರು ಹೀಗೆ ಹೇಳಿದ್ದಾನೆ, "Every one that multiplies prayer is heard" (John Lightfoot, *A Commentary on the New Testament from the Talmud and Hebraica: Matthew—1 Corinthians*, vol. 2, *Matthew—Mark* [Oxford: Oxford University Press, 1859; reprint, Grand Rapids, Mich.: Baker, 1979], 145). [20]Keener, 213; citing John E. Stambaugh and David L. Balch, *The New Testament in Its Social Environment*, Library of Early Christianity, vol. 2 (Philadelphia: Westminster Press, 1986), 129.

[21]Mounce, 55. [22]Wilkins, 44-45. [23]John R. W. Stott, *The Message of The Sermon on the Mount (Matthew 5-7): Christian Counter Culture*, The Bible Speaks Today (Downers Grove, Ill.: Inter-Varsity Press, 1978), 144. [24]Wisdom of Solomon 14:3; Sirach 23:1, 4. [25]Craig A. Evans, ed., *The Bible Knowledge Background Commentary: Matthew—Luke*, Bible Knowledge Series, vol. 1 (Colorado Springs, Colo.: Victor, 2003), 232. [26]*Didache* 8.2. [27]ವಾಗ್ದಾನ "ಅವರ ಪಾಪಗಳನ್ನು ಎಂದಿಗೂ ನೆನಪಿಗೆ ತಾರೆನು" (ಇಬ್ರಿಯ 8:12; 10:17) ಸರಳವಾಗಿ ಇದರ ಅರ್ಥವೆನೆಂದರೆ ದೇವರು ನಮ್ಮ ತಪ್ಪುಗಳಿಗಾಗಿ ಆತನು ಶಿಕ್ಷೆಯನ್ನು ಕೊಡುವದಿಲ್ಲ ನೋಡಿರಿ. ನೋಡಿರಿ F. F. Bruce, *The Epistle to the Hebrews*, The New International Commentary on the New Testament (Grand Rapids, Mich.: Wm. B. Eerdmans Publishing Co., 1964), 175. [28]Mishnah *Yoma* 8.1. [29]Mishnah *Taanith* 1.4-7;

2.9. The *Didache* ಎರಡನೆಯ ಶತಮಾನದಿಂದ ವಿಶ್ವಾಸಿಗಳಿಗೆ ಈ ರೀತಿಯಾಗಿ ಸೂಚನೆ ನೀಡಲಾಗಿದೆ: "ಕಪಟಿಗಳು ಮಾಡುವ ಉಪವಾಸದಂತೆ ನಿಮ್ಮ ಉಪವಾಸ ಅವರಾಂದಿಗೆ ಹೊಂದಿಕೆಯಾಗಬಾರದು. ಅವರು ಸೋಮವಾರ ಮತ್ತು ಗುರುವಾರ ಅದಕ್ಕಾಗಿ ನೀವು ಬುಧವಾರ ಮತ್ತು ಶುಕ್ರವಾರ ಉಪವಾಸಮಾಡಬೇಕು" (*Didache* 8.1). [30]ದಾವೀದನ ಉಪವಾಸ ಅವಧಿ ಮುಗಿದ ನಂತರ "ಅವನು ಸ್ನಾನಮಾಡಿ, ತೈಲಹಚ್ಚಿಕೊಂಡು, ಮತ್ತು ಬಟ್ಟೆಗಳನ್ನು ಬದಲಾಯಿಸಿದನು" (2 ಸಮುವೇಲ 12:20).

[31]Keener, 228. [32]ಮಾದರಿ ಪ್ರಾರ್ಥನೆಯನ್ನು ಪುನರಾವರ್ತನೆ ಮಾಡುವದು ಹಾಗಿದ್ದರೂ, ಇದನ್ನು ಎರಡನೆ ಶತಮಾನದಲ್ಲೆ ಪ್ರಾರಂಭದ ಅವಧಿಯಲ್ಲಿ ಮಾಡುವದನ್ನು ನೋಡುತ್ತೇವೆ. ಬಹುಶ ಯೆಹೂದ್ಯರು ಮಾಡುವದು ಕನ್ನಡಿಯಂತೆ *Didache* (ಧರ್ಮ ಬೋಧನೆ) ಇದು ವಿಶ್ವಾಸಿಗಳು ಪ್ರತಿದಿನ ಮೂರು ಸಾರಿ ಮಾದರಿ ಪ್ರಾರ್ಥನೆ ಮಾಡಬೇಕೆಂದು ಸೂಚಿಸುತ್ತದೆ. (*Didache* 8.2, 3.)